ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಸೆಪ್ಟೆಂಬರ್ -೨೦೧೫ ಸಂಚಿಕೆ - ೨

ನಗರೀಕರಣ ವಿರುದ್ಧ ಗ್ರಾಮೀಣೀಕರಣ

*

ಮಿತ್ರರೆ, ಯುಗದ ಕೂಗು
ಸಂಪೂರ್ಣ ಕ್ರಾಂತಿ ಆಂದೋಲನ

*

ಭಾರತದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ
ವಿಮರ್ಶಾತ್ಮಕ ಚಿಂತನೆ

*

ಅಣುಯುಗದಲ್ಲಿ ಅಹಿಂಸೆ
ಅನಿವಾರ್ಯ

*

ತಪ್ಪಾದ ಕಾರ್ಯ, ಕೆಟ್ಟ ಪ್ರತಿಫಲ

ಜನಪದ ವಿಚಾರದಲ್ಲಿ

ಸೆಪ್ಟೆಂಬರ್ - ೨೦೧೫

ನಗರೀಕರಣದ ಭರಾಟೆಯಲ್ಲಿ ದೇಶದ ಬೆನ್ನುಮೂಳೆಯಾದ ಗ್ರಾಮಗಳು ಸೊರಗುತ್ತಿವೆ, ಸಾಯುತ್ತಿವೆ. ಪಾಶ್ಚಿಮಾತ್ಯ ಅಂಧ ಅನುಕರಣೆಯ ಫಲವೇ ನಗರೀಕರಣ. ನಗರೀಕರಣದ ವಿರುದ್ಧ ಗ್ರಾಮೀಣೀಕರಣದ ತುರ್ತು ಅಗತ್ಯ ಎಂಬುದು ಈ ಲೇಖನದ ಸೂಚನೆ.

ಅಂದು ಜಯಪ್ರಕಾಶ್ ನಾರಾಯಣರು ಪ್ರಾರಂಭಿಸಿದ್ದ ಸಂಪೂರ್ಣ ಕ್ರಾಂತಿ ಆಂದೋಲನ ಈಗಲೂ ನಡೆಯಬೇಕಿದೆ ಎಂಬ ವಿಚಾರ ತಿಳಿಸುತ್ತದೆ ಈ ಲೇಖನ.

ರಾಷ್ಟ್ರದ ರಾಷ್ಟ್ರಪತಿ ತಟಸ್ಥ ಮೊದಲ ಪ್ರಜೆ. ಅವರು ಹೇಳುವ ಮಾತುಗಳು ಮಾರ್ಗದರ್ಶಿ. ದೇಶದ ಇಂದಿನ ಸ್ಥಿತಿಯ ಬಗ್ಗೆ ಕಳೆದ ಸ್ವಾತಂತ್ರ್ಯೋತ್ಸವದಂದು ಅವರು ವ್ಯಕ್ತಪಡಿಸಿದ ವಿಚಾರಗಳು ಇಲ್ಲಿದೆ.

ಶಸ್ತ್ರಾಸ್ತ್ರಗಳ ನಿರ್ಮಾಣವಾದಷ್ಟೂ ಅಹಿಂಸೆಯ ವಿಚಾರ ಹೆಚ್ಚು ಪ್ರಬಲವಾಗುತ್ತದೆ. ಆ ಕುರಿತ ಸಮಯೋಚಿತ ವಿಚಾರಗಳು ಇಲ್ಲಿದೆ.

ಇಂದಿನ ಆರ್ಥಿಕಾಭಿವೃದ್ಧಿ ಅಂದರೆ ಕೇವಲ ಜಿ.ಡಿ.ಪಿಗೆ ಸಂಬಂಧಿಸಿದ್ದಾಗಿದೆ. ಜೀವನದ ಇತರೆ ಮೌಲ್ಯಗಳು ನಶಿಸಿಹೋಗುತ್ತಿವೆ. ಈ ಆರ್ಥಿಕ ವ್ಯವಸ್ಥೆಗೆ ಭಿನ್ನವಾದ ಪರ್ಯಾಯ ಅರ್ಥವ್ಯವಸ್ಥೆ ಏನು ಎಂಬುದನ್ನು ತಿಳಿಯಪಡಿಸಲು ಪ್ರಯತ್ನಿಸುತ್ತದೆ ಈ ಲೇಖನ.

೧೯೪೮ರಲ್ಲಿ, ೬೭ ವರ್ಷಗಳ ಹಿಂದೆ ಜವಹರಲಾಲ್ ನೆಹರು ಪ್ರಧಾನಮಂತ್ರಿಯಾಗಿ ಹೇಳಿದ್ದ ಮಾತುಗಳು ಸ್ವಾತಂತ್ರ್ಯ ಬಂದಾದ ೬೮ ವರ್ಷಗಳ ನಂತರವೂ ಮನನ ಮಾಡುವ ವಿಚಾರಗಳು ಈ ಲೇಖನದಲ್ಲಿದೆ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟೆಂಬರ್ - ೨೦೧೫
ಸಂಪುಟ - ೧೬
ಸಂಚಿಕೆ - ೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ನಮ್ಮವ್ವ ಮಲಗಿದ್ದಾಳೆ

ಶ್! ನಮ್ಮವ್ವ ಮಲಗಿದ್ದಾಳೆ,
ಸದ್ದು ಮಾಡಬೇಡಿ, ಸುಮ್ಮನಿರಿ
ಬಳಲಿ, ಬೆಂಡಾಗಿ, ಬಿಳಿ ಚಾದರ
ಹೊದ್ದು ಮಲಗಿದ್ದಾಳೆ ಸುಮ್ಮನಿರಿ

ಒಲೆ ಊದಿ, ಊದಿ ಕಣ್ಣು ಕೆಂಪಾಗಿ,
ಹೊಗೆ ಹತ್ತಿ ಕೆಮ್ಮಿ ಕೆಮ್ಮಿ ಕೆನರಿ
ಕಂಗಾಲಾದರೂ, ನೆಲಗುಡಿಸಿ,
ಸಾರಿಸಿ, ವರೆಸಿ,
ಸೋತು ಮಲಗಿದ್ದಾಳೆ ಸುಮ್ಮನಿರಿ

ರೊಟ್ಟಿಯಷ್ಟೇ ಕೈಯನ್ನೂ ಸುಟ್ಟುಕೊಂಡು,
ಅನ್ನಕ್ಕಿಂತ ಹದವಾಗಿ ತಾನು ಬೆಂದು
ಸೌದೆಯೇ ತಾನಾಗಿ ಒಲೆ
ಉರಿಸಿ, ಬೇಯಿಸಿ,
ಬಿಡಿಸಿ, ಉಣಿಸಿ ಮಲಗಿದ್ದಾಳೆ ಸುಮ್ಮನಿರಿ

ಬಡತನದ ಸಿರಿಯಲ್ಲೇ ಮರೆದು,
ಹರಿದ ಸೆರಗಿಗೆ
ನೂರೆಂಟು ಗಂಟುಗಳ ಬಿಗಿದು
ತನ್ನ ಮನೆ-ಮಕ್ಕಳಿಗಾಗಿ,
ತವರು-ತನ್ನವರನ್ನೆಲ್ಲಾ
ಮರೆತು ಮಲಗಿದ್ದಾಳೆ ಸುಮ್ಮನಿರಿ

ತನ್ನ ಇಡೀ ಬದುಕನ್ನೇ ತೇದು,
ತ್ಯಾಗ ಮಾಡಿದ
ಅವಳಿಗೆ ಕ್ಷಣವಾದರೂ ಶಾಂತಿ ನೀಡಿ
ಕೃತಜ್ಞತೆಯಿಂದ ಕೈಮುಗಿಯಬೇಕಿದೆ ಸುಮ್ಮನಿರಿ,
ನಮ್ಮವ್ವ ಮಲಗಿದ್ದಾಳೆ ಸುಮ್ಮನಿರಿ.

– ನವಾಬ್ ಬೇಲೂರು, 'ಸಂಚಯ' ಸಾಭಾರ

ಚಿಂತನೆಗೊಂದು ಸಂಗತಿ

ವರ್ತಮಾನದಲ್ಲಿ ಜೀವನವನ್ನು ಹೆಚ್ಚು ಹೆಚ್ಚು ತಾಂತ್ರೀಕರಣಗೊಳಿಸುವ ಪ್ರಯತ್ನ ನಡೆಯುತ್ತಿದೆ. ಆ ಪ್ರಯತ್ನದ ಅಂಗವಾಗಿ 'ಡಿಜಿಟಲ್ ಇಂಡಿಯ' ಎಂಬ ಯೋಜನೆ ಪ್ರಾರಂಭವಾಗಿದೆ. ಯಾವ ದೇಶವೂ ನಿರಕ್ಷರ ಮತ್ತು ಅನಾರೋಗ್ಯಕರ ಪ್ರಜೆಯನ್ನು ತನ್ನಲ್ಲಿರಿಸಿಕೊಂಡು ಬೃಹತ್ ಕೈಗಾರಿಕಾ ದೇಶವಾಗಲಾರದು. ದೇಶದಲ್ಲಿ ಈಗ ೧೨೮ ಕೋಟಿ ಜನಸಂಖ್ಯೆಯಿದೆ. ನಿರಕ್ಷರ ಸಂಖ್ಯೆ ೭೦%ಕ್ಕೂ ಹೆಚ್ಚಿದೆ. ಮತ್ತು ಅನಾರೋಗ್ಯದಿಂದ ಬಳಲುತ್ತಿರುವವರ ಸಂಖ್ಯೆ ೯೦% ಕ್ಕೂ ಹೆಚ್ಚಿದೆ. ಇಂಥ ದಯನೀಯ ಸಾಮಾಜಿಕ ಪರಿಸ್ಥಿತಿಯನ್ನಿರಿಸಿಕೊಂಡು ಡಿಜಿಟಲ್ ಇಂಡಿಯ ಯೋಜನೆಯ ಮೂಲಕ ಭಾರತವನ್ನು ಬಲಿಷ್ಠ ದೇಶವನ್ನಾಗಿ ಮಾಡಲು ಸರ್ಕಾರ ಹೊರಟಿದೆ. ತಂತ್ರಜ್ಞಾನದಿಂದ ಜನರನ್ನು ಬಡತನದಿಂದ ಮತ್ತು ನಿರಕ್ಷರತೆಯಿಂದ ಹೊರಗೆತ್ತಲಾಗದಿದ್ದರೆ. ಆ ತಂತ್ರಜ್ಞಾನವೇ ಎಲ್ಲ ಸಮಸ್ಯೆಗೂ ಮದ್ದು ಎಂದು ತಿಳಿಯುವುದು ತಪ್ಪಾಗುತ್ತದಲ್ಲವೆ? ದೇಶವನ್ನು ಬಲಾಢ್ಯವನ್ನಾಗಿ ಮಾಡಬೇಕಾದರೆ ಕುಶಲ ಕೆಲಸಗಾರರು ಬೇಕಾಗುತ್ತದೆ. ನಮ್ಮ ದೇಶದಲ್ಲಿರುವ ಕಾರ್ಯಸಮರ್ಥರಲ್ಲಿ ಕೇವಲ ೨.೩% ರಷ್ಟು ಜನರು ಮಾತ್ರ ಔಪಚಾರಿಕ ಕೌಶಲ್ಯವನ್ನು ಹೊಂದಿದ್ದಾರೆ. ಬೇರೆ ದೇಶಗಳಲ್ಲಿ ಅಲ್ಲಿಯ ಜನಸಂಖ್ಯೆಯ ೭೫%, ೮೦%, ೯೬% ರಷ್ಟು ಜನರು ಕೌಶಲ್ಯವನ್ನು ಹೊಂದಿದ್ದಾರೆ. ಅಂಥ ಪರಿಸ್ಥಿತಿಯಲ್ಲಿ ಭಾರತವನ್ನು ಬಲಾಢ್ಯ ಆರ್ಥಿಕ ದೇಶವನ್ನಾಗಿ ಹೇಗೆ ಮಾಡಲು ಸಾಧ್ಯ ಎಂಬುದನ್ನು ಕುರಿತು ಚಿಂತಿಸಬೇಕಿದೆ. ಯಾವುದೇ ಒಂದು ದೇಶದ ಬಲಾಢ್ಯತೆ ಕೇವಲ ಆರ್ಥಿಕ ಬಲವನ್ನು ಅವಲಂಬಿಸಿಲ್ಲ. ಆರ್ಥಿಕ ಬಲದೊಂದಿಗೆ ದೇಶದ ನಾಗರೀಕರ ಸಮಗ್ರ ಸಾಂಸ್ಕೃತಿಕ ಜೀವನದ ಗುಣಮಟ್ಟದ ಏರಿಕೆಯೂ ಕಾರಣವಾಗುತ್ತದೆ. ಮತ್ತು ಸಾಂಸ್ಕೃತಿಕ ಜೀವನದ ಉತ್ಕೃಷ್ಟ ಗುಣಮಟ್ಟವೇ ದೇಶದ ಬಲಾಢ್ಯತೆಯನ್ನು ನಿರ್ಧರಿಸುತ್ತದೆ. ದೇಶದ ಜನಸಂಖ್ಯೆಯ ೨.೩%ರಷ್ಟು ಜನರು ಮಾತ್ರ ಕುಶಲತೆಯನ್ನು ಹೊಂದಿದ್ದಾರೆ. ಇಷ್ಟು ದೊಡ್ಡ ಪ್ರಮಾಣದ ಅಕುಶಲ ಜನರನ್ನು ಡಿಜಿಟಲ್ ಇಂಡಿಯಾದ ಕಾರ್ಯ ಯೋಜನೆಯ ಮೂಲಕವೇ ದೇಶದ ಸಮಸ್ತ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ. ಕೇಂದ್ರೀಕೃತ ಉದ್ಯೋಗಕ್ಕಿಂತಲೂ ವಿಕೇಂದ್ರೀಕೃತ ಮತ್ತು ಅತಿ ಕುಶಲತೆಯ ತರಬೇತಿ ಬಯಸದ ಉದ್ಯೋಗಗಳನ್ನು ಸೃಷ್ಟಿಸುವುದರ ಮೂಲಕ ಭಾರತವನ್ನು ಬಲಾಢ್ಯದೇಶವನ್ನಾಗಿ ಮಾಡಬಹುದು. ಈಗಾಗಲೇ ಭಾರತದ ಗ್ರಾಮಗಳಲ್ಲಿ ಇರುವ ಪಾರಂಪರಿಕ ಉದ್ಯೋಗಗಳಾದ ನೇಕಾರಿಕೆ, ಎಣ್ಣೆಗಾಣ, ಕುಂಬಗಾರಿಕೆ ಮತ್ತು ಇನ್ನೂ ಇಂಥ ಹತ್ತಾರು ವಿಕೇಂದ್ರಿತ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿದರೆ ಡಿಜಿಟಲ್ ಇಂಡಿಯದಂಥಹ ಯೋಜನೆಯ ಉದ್ದೇಶ ಕಡಿಮೆ ಬಂಡವಾಳದೊಂದಿಗೆ ಬಲಾಢ್ಯ ದೇಶವಾಗಬಲ್ಲದು. ಈ ಕುರಿತು ಚಿಂತನೆ ನಡೆಯಬೇಕು.

ನಗರೀಕರಣ ವಿರುದ್ಧ ಗ್ರಾಮೀಣೀಕರಣ

– ಸುರೇಂದ್ರ ಕೌಲಗಿ

ಸತತವಾಗಿ ನಡೆಯುತ್ತಿರುವ ರೈತರ ಆತ್ಮಹತ್ಯೆಗಳಿಂದಾಗಿ ಗ್ರಾಮಗಳು ನಗರದ ವಿರುದ್ಧ ಹೋರಾಟಕ್ಕೆ ನಿಲ್ಲಬೇಕಾದ ಪ್ರಸಂಗ ಬಂದಿದೆ. ನಗರೀಕರಣದ ಹೆಸರಿನಲ್ಲಿ ಗ್ರಾಮಗಳು ಬರಡಾಗುತ್ತಿವೆ. ಗ್ರಾಮಗಳಲ್ಲಿಯ ಯುವಕರು ಉದ್ಯೋಗ ಮತ್ತು ತಾವು ಕಲ್ಪಿಸಿಕೊಂಡಿರುವ ಒಳ್ಳೆಯ ಭವಿಷ್ಯವನ್ನು ಹುಡುಕುತ್ತ ನಗರಗಳಿಗೆ ಧಾವಿಸುತ್ತಿದ್ದಾರೆ. ಗ್ರಾಮಗಳು ವೃದ್ಧರ, ಅಶಕ್ತರ, ತಿಳುವಳಿಕೆ ಇಲ್ಲದವರ ತಾಣವಾಗಿದೆ. ಕೃಷಿ ಭೂಮಿ ಕಡಿಮೆಯಾಗುತ್ತಿರುವುದರ ಜೊತೆಗೆ ಕೃಷಿ ಕ್ಷೀಣವಾಗುತ್ತಿದೆ. ಹವಾಮಾನದ ವೈಪರೀತ್ಯ ಕಾಡುತ್ತಿದೆ. ಭೂಮಿಕೊಡುವ ಬೆಳೆಗಳ ಬದಲಾಗಿ ಬ್ಯಾಂಕುಗಳು ಕೊಡುವ ಸಾಲಗಳ ಬಡ್ಡಿ ಹೆಚ್ಚಾಗುತ್ತಿದೆ. ತಮ್ಮ ಪ್ರದೇಶದಲ್ಲಿಯೇ ಗ್ರಾಮಸ್ಥರು ಎರಡನೇ ದರ್ಜೆಯ ಪ್ರಜೆಗಳಾಗುತ್ತಿದ್ದಾರೆ. ಒಳ್ಳೆಯ ವೈದ್ಯಕೀಯ ಚಿಕಿತ್ಸೆಗಾಗಿ ಮತ್ತು ಒಳ್ಳೆಯ ಶಿಕ್ಷಣ ಪಡೆಯುವುದಕ್ಕಾಗಿ ನಗರಗಳಿಗೆ ಹೋಗಬೇಕಾಗಿದೆ. ಇಂಥ ಸಂದರ್ಭದಲ್ಲಿ ರೈತರ ಆತ್ಮಹತ್ಯೆಗಳು ಗ್ರಾಮೀಣ ಜನರು ನಗರಗಳ ವಿರುದ್ಧ ಹೂಡಿರುವ ಬಂಡಾಯದ ಸಂಕೇತವೇ ಆಗಿದೆ. ಒಂದು ವೇಳೆ ಗ್ರಾಮೀಣರಲ್ಲಿ ಗಾಂಧೀ ಪ್ರಣಿತ ರಚನಾತ್ಮಕ ಕಾರ್ಯಕ್ರಮಗಳು ನಡೆದಿದ್ದರೆ ರೈತರು ಆತ್ಮಹತ್ಯೆಗೆ ಶರಣಾಗುವ ಬದಲು ನಗರಗಳ ವಿರುದ್ಧ ಸತ್ಯಾಗ್ರಹಮಾಡುತ್ತಿದ್ದರು ಮತ್ತು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟಮಾಡುತ್ತಿದ್ದರು. ನಗರೀಕರಣವೆಂಬುದು ಜಾಗತೀಕರಣ, ಕೈಗಾರಿಕೀಕರಣ, ಖಾಸಗೀಕರಣ ಮುಂತಾದವುಗಳಿಗೆ ಪ್ರಚೋದನೆಕೊಡುತ್ತಿರುವ ಪಾಶ್ಚಿಮಾತ್ಯ ಚಿಂತನೆಯ ಅರ್ಥಶಾಸ್ತ್ರದ ಪ್ರತೀಕವಾಗಿದೆ. ಪಾಶ್ಚಿಮಾತ್ಯ ಚಿಂತನೆಯ ಅರ್ಥಶಾಸ್ತ್ರ, ಅನೇಕ ಪಾಶ್ಚಿಮಾತ್ಯ ಅರ್ಥಶಾಸ್ತ್ರಜ್ಞರೆ ಹೇಳುವಂತೆ ಅಮಾನವೀಯವಾಗಿದೆ. ಕೊಳ್ಳಬಾಕ ಸಂಸ್ಕೃತಿಯನ್ನು ಬೆಳೆಸುವ ಅರ್ಥಶಾಸ್ತ್ರದ ಗರ್ಭದಿಂದ ಹುಟ್ಟಿರುವ ನಗರಗಳು ಆ ಅರ್ಥಶಾಸ್ತ್ರದ ನೀತಿಗನುಗುಣವಾಗಿ ಗ್ರಾಮಗಳನ್ನು ತಮ್ಮ ಜೀವನದ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ವಸಾಹತುಗಳನ್ನಾಗಿ ಮಾರ್ಪಡಿಸಿವೆ. ನಗರವಾಸಿಗಳಿಗೆ ಮತ್ತು ಅಲ್ಲಿರುವ ಎಲ್ಲ ಪ್ರಕಾರದ ಕೈಗಾರಿಕೆಗಳಿಗೆ ಬೇಕಾಗುವ ಎಲ್ಲ ಮೂಲ ವಸ್ತುಗಳನ್ನು ಗ್ರಾಮಗಳೇ ಒದಗಿಸುತ್ತವೆ. ಇದರಲ್ಲಿ ನಗರಗಳಿಗೆ ಬೇಕಾಗುವ ಮಾನವ ಸಂಪನ್ಮೂಲ ಕೂಡ ಸೇರಿದೆ. ಆದರೆ ಇದಕ್ಕೆ ಬದಲಾಗಿ ನಗರಗಳು ಗ್ರಾಮಕ್ಕೆ ಕೊಡುವ ಪ್ರತಿಫಲವೇನೆಂದರೆ ಅವುಗಳನ್ನು ಎಲ್ಲ ವಿಷಯಗಳಲ್ಲಿ ಪರಾವಲಂಬಿತಮಾಡಿರುವುದು. ಈ ಪರಾವಲಂಬನೆ ಎಷ್ಟು ಭಯಾನಕವಾಗಿದೆಯೆಂದರೆ ಜೀವನದ ತಮ್ಮ ಎಲ್ಲ ಅಗತ್ಯಗಳನ್ನು ಪೂರೈಸಿಕೊಳ್ಳಬೇಕಾದರೆ ನಗರಗಳನ್ನೆ ಅವಲಂಬಿಸಬೇಕಾಗಿದೆ. ನಗರದ

ಸಂಪರ್ಕವಿಲ್ಲದೆ ಗ್ರಾಮಜೀವನ ನಡೆಯುವುದೇ ಇಲ್ಲ ಎಂಬ ಅಭಿಪ್ರಾಯ ಗ್ರಾಮಸ್ಥರ ಮನದಲ್ಲಿ ಆಳವಾಗಿ ಬೇರೂರಿದೆ. ಆದ್ದರಿಂದ ತಮ್ಮ ಕುಟುಂಬಗಳಲ್ಲಿಯ ಒಬ್ಬ ಸದಸ್ಯನಾದರೂ ನಗರಕ್ಕೆ ಕಡ್ಡಾಯವಾಗಿ ವಲಸೆ ಹೋಗಬೇಕು ಮತ್ತು ಅಲ್ಲಿ ಸಂಪಾದನೆ ಮಾಡಬೇಕು ಎಂಬುದು ಗ್ರಾಮೀಣ ಜನರ ಜೀವನ ಮೌಲ್ಯವೇ ಆಗಿದೆ.

ಗ್ರಾಮ ಜೀವನವನ್ನು ಉತ್ತಮಪಡಿಸಬಹುದಾದ ಗ್ರಾಮ ಪಂಚಾಯತಿಗಳು ನಗರಗಳಲ್ಲಿರುವ ವಿಧಾನಸಭೆ, ನಗರಸಭೆ ಮತ್ತು ಇನ್ನಿತರ ಸ್ಥಳೀಯ ಸಂಸ್ಥೆಗಳಲ್ಲಿ ನಡೆಯುವ ರಾಜಕೀಯದಿಂದ ಮತ್ತು ಅವ್ಯವಹಾರಗಳಿಂದ ಪ್ರಭಾವಿತವಾಗಿವೆ. ಪಂಚಾಯತಿಗಳು ಜನರನ್ನು ಒಂದಾಗಿಸುವ ಬದಲು ಪರಸ್ಪರರನ್ನು ವಿರೋಧಿಗಳನ್ನಾಗಿ ಮಾಡಿವೆ. ನಗರ ಸಮೀಪದಲ್ಲಿರುವ ಗ್ರಾಮಗಳ ಮೇಲೆ ಆಯಾ ನಗರದ ಪೂರ್ಣಛಾಯೆ ಬಿದ್ದಿರುತ್ತದೆ.

ನಗರ ಜೀವನಶೈಲಿ ಸಂಪೂರ್ಣವಾಗಿ ಅದು ಅಭಿವೃದ್ಧಿಯಾಗಿರಬಹುದು, ಕೈಗಾರಿಕೆಯಾಗಿರಬಹುದು, ಶಿಕ್ಷಣವಾಗಿರಬಹುದು, ಕಟ್ಟಡಗಳ ವಿನ್ಯಾಸವಾಗಿರಬಹುದು – ಎಲ್ಲವೂ ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಅರ್ಥ ನೀತಿಯಿಂದ ಪ್ರಭಾವಿತವಾಗಿದೆ. ಪಾಶ್ಚಿಮಾತ್ಯ ಮಾದರಿಯ ಅರ್ಥನೀತಿ ಮಾನವನನ್ನು ಅಮಾನವೀಯನನ್ನಾಗಿ ಮಾಡುತ್ತದೆ. ಇಂಥದೇ ಅರ್ಥನೀತಿಯನ್ನು ಗ್ರಾಮಗಳಿಗೂ ಅನ್ವಯಿಸುತ್ತಾ ಹೋದಲ್ಲಿ ಅವು ವಾಸಮಾಡಲು ಯೋಗ್ಯವಲ್ಲದ ತಾಣಗಳಾಗಿ ರೂಪುಗೊಳ್ಳುತ್ತವೆ. ಅಂಥ ಭಯಾನಕ ಪರಿಸ್ಥಿತಿ ನಿರ್ಮಾಣವಾಗುವ ಮೊದಲು ಗ್ರಾಮಗಳು ನಗರೀಕರಣದ ವಿರುದ್ಧ ಬಂಡಾಯದ ಬಾವುಟ ಹಾರಿಸಬೇಕು. ಗ್ರಾಮಗಳ ಹಿಂದಿನ ಸ್ವಾವಲಂಬಿ ಜೀವನ ಮತ್ತೆ ಮರುಕಳಿಸುವಂತೆ ಮಾಡಬೇಕು. ಗ್ರಾಮದ ಜನರು ತಮ್ಮ ಗ್ರಾಮದಲ್ಲಿರುವ ಎಲ್ಲ ಸಂಪನ್ಮೂಲಗಳನ್ನು – ಮಾನವ ಸಂಪನ್ಮೂಗಳನ್ನೂ ಸೇರಿ ಗ್ರಾಮೀಣೀಕರಣಗೊಳ್ಳುವಂತೆ ಮಾಡಬೇಕು. ಹಳ್ಳಿಗಳನ್ನು ಸ್ಮಾರ್ಟ್ ಹಳ್ಳಿಗಳನ್ನಾಗಿ ಮಾಡುವ ಸರ್ಕಾರದ ಯೋಜನೆಯ ಬಗ್ಗೆ ಗ್ರಾಮೀಣರು ಎಚ್ಚೆತ್ತುಕೊಳ್ಳಬೇಕು. ಆ ಯೋಜನೆ ಗ್ರಾಮದ ಮೂಲಭೂತ ಅಸ್ಮಿತೆಯನ್ನು ಹಾಳುಗೆಡವದಂತೆ ಇರುವಂತೆ ಎಚ್ಚರವಹಿಸಬೇಕು. ಆ ಯೋಜನೆಯಿಂದಾಗಿ ಗ್ರಾಮದ ಜನರು ನಗರಗಳಿಗೆ ಪೂರ್ಣವಾಗಿ ವಲಸೆ ಹೋಗುವುದು ನಿಲ್ಲುವಂತಾಗಬೇಕು. ಗ್ರಾಮಗಳಲ್ಲಿಯೇ ಮನೆಮನೆಗಳಲ್ಲಿ ಕರಕುಶಲ ತಯಾರಿಕ ಉದ್ಯೋಗಗಳು ನಡೆಯುವಂತಾಗಬೇಕು. ಉದ್ಯೋಗ ಬಯಸುವ ಎಲ್ಲರಿಗೂ ಉದ್ಯೋಗ ಸಿಗುವಂತಾಗಬೇಕು. ಆರೋಗ್ಯದ ಸಮಸ್ಯೆಗಳನ್ನು ಸಾಧ್ಯವಾದಷ್ಟು ಗಿಡ ಮೂಲಿಕೆಗಳಿಂದ ಮತ್ತು ಪ್ರಕೃತಿ ಚಿಕಿತ್ಸೆಯಿಂದ ಬಗೆಹರಿಸುವಂತಾಗಬೇಕು. ಒಟ್ಟಾರೆ ಗ್ರಾಮದವರ ದೃಷ್ಟಿ ನಗರಗಳ ಕಡೆಗೆ ಇರದೆ ತಮ್ಮ ಗ್ರಾಮದ ಕಡೆಗೆ ಇರುವಂತೆ ನೋಡಿಕೊಳ್ಳಬೇಕು. ಅವರ ಮುಖ ನಗರದ ಕಡೆಗೆ ಇರದೆ ಗ್ರಾಮದ ಕಡೆಗೆ ಇರುವಂತೆ ಆಗಬೇಕು. ಇಂಥ ಸಕಾರಾತ್ಮಕ ಪರಿಸ್ಥಿತಿಯನ್ನು ಹಳ್ಳಿಗಳಲ್ಲಿ ಉಂಟುಮಾಡುವುದಕ್ಕಾಗಿ ಗ್ರಾಮಸ್ಥರು ನಗರೀಕರಣದ ವಿರುದ್ಧ ಗ್ರಾಮೀಣೀಕರಣದ ಹೋರಾಟವನ್ನು ಪ್ರಾರಂಭಿಸಬೇಕು. ಅದಕ್ಕೆ ಕಾಲ ಕೂಡಿ ಬಂದಿದೆ.

ಮಿತ್ರರೆ, ಯುಗದ ಕೂಗು ಸಂಪೂರ್ಣ ಕ್ರಾಂತಿ ಆಂದೋಲನ

– ಜಯಪ್ರಕಾಶ್ ನಾರಾಯಣ್

(೫ಜೂನ್೧೯೭೪ರಂದು ಪಟನಾದಲ್ಲಿ ಜಯಪ್ರಕಾಶ್ ನಾರಾಯಣರು ಮಾಡಿದ ಐತಿಹಾಸಿಕ ಭಾಷಣದ ಮುಂದಿನ ಭಾಗ ಕಳೆದ ಸಂಚಿಕೆಯಿಂದ ಮುಂದುವರೆದಿದೆ– ಸಂ.)

ಮಿತ್ರರೆ, ಈ ಆಂದೋಲನ ಯಾರಿಂದಲೂ ನಿಲ್ಲಿಸಲಾಗದ, ಜಯಪ್ರಕಾಶ್ ನಾರಾಯಣರಿಂದ ನಿಲ್ಲಿಸಲಾಗದ ಆಂದೋಲನವಿದು. ಈ ಆಂದೋಲನ ಏಕೆ ನಡೆದಿದೆ? ವಿದ್ಯಾರ್ಥಿಗಳಿಗೆ ಅವರದೇ ಆದ ಸಮಸ್ಯೆಗಳಿವೆ. ಆದ್ದರಿಂದ ಅವರಲ್ಲಿ ಅಸಂತೋಷವಿದೆ. ಇದೆಲ್ಲವು ದೋಷಪೂರ್ಣ ಶಿಕ್ಷಣದ ಕಾರಣದಿಂದ. ನಿಮ್ಮದೇ ಆದ ಸಮಸ್ಯೆಗಳಿವೆ – ಪದಾರ್ಥಗಳ ದುಬಾರಿ ಬೆಲೆಯ ಕಾರಣವಾಗಿ ಬೀಸೋ ಕಲ್ಲಿನಲ್ಲಿ ಸಿಕ್ಕಿಹಾಕಿಕೊಂಡಂತಾಗಿದೆ. ದಿನಕಳೆದಂತೆ ಪದಾರ್ಥಗಳ ಬೆಲೆ ಹೆಚ್ಚಾಗುತ್ತಲಿದೆ. ಭ್ರಷ್ಟಾಚಾರವಿದೆ. ಲಂಚ ಕೊಡಲೇಬೇಕಾಗಿದೆ. ನಿರುದ್ಯೋಗ ಹೆಚ್ಚುತ್ತಲಿದೆ. ಶಿಕ್ಷಿತರ, ಶಿಕ್ಷಿತರಲ್ಲದ ಎಲ್ಲ ಜನರ ಸಮಸ್ಯೆ ಇದಾಗದೆ ಇದ್ದಿದ್ದರೆ ೧೦೦ಜನ ಜಯಪ್ರಕಾಶ್ ನಾರಾಯಣರು ಬಯಸಿದ್ದರೂ ಕೂಡ ಈ ಆಂದೋಲನ ಪ್ರಾರಂಭವಾಗುತ್ತಿತ್ತೆ?. ಯುಗದ ಕೂಗು ಇದಾಗಿದೆ. ಈ ಕೂಗಿನಿಂದಾಗಿಯೇ ಇಷ್ಟೊಂದು ಜನ ಇಲ್ಲಿ ಸೇರಿದ್ದಾರೆ. ರಾಮಮೂರ್ತಿ ಅವರು ಹೇಳಿದಂತೆ ಇದು ಮೂಲೆಮೂಲೆಗೂ ಹಬ್ಬಿದೆ. ಅಧಿಕಾರದಲ್ಲಿರುವವರು ಇಲ್ಲಿ ಕಡಿಮೆ ಜನ ಇದ್ದಾರೆ ಎಂದು ತಿಳಿದಿದ್ದಾರೆ. ಆದರೆ ಅವರ ಮನಸ್ಸಿನಲ್ಲಿ ಬೆಂಕಿ ಹತ್ತಿದೆ.

ಈ ಆಂದೋಲನ ನಿಲ್ಲುವಂಥದಲ್ಲ. ಇದು ತನ್ನದೇ ಆದ ಗತಿಯಲ್ಲಿ ಮುನ್ನಡೆಯುವುದು. ಈ ಸಭೆ ನಡೆಯದಂತೆ ಎಷ್ಟೊಂದು ಪ್ರಯತ್ನನಡೆದಿದೆ. ನನ್ನನ್ನೂ ಕೂಡ ಬಂಧಿಸಿ ಕರೆದುಕೊಂಡು ಹೋಗಬಹುದು. ಹೌಸ್ ಅರೆಸ್ಟ್ ಮಾಡಬಹುದು. ರಾಜನಾರಾಯಣರನ್ನು ಇಲ್ಲಿಂದ ಕಳುಹಿಸಿದ್ದಾರೆ. ನಾನು ಬಿಹಾರನವನು. ನನ್ನನ್ನು ಎಲ್ಲಿಗೆ ಕಳುಹಿಸುವರು. ಬೆಂಕಿ ಹತ್ತಿಕೊಂಡಿದೆ. ನಿಮಗೆ (ಸರ್ಕಾರಕ್ಕೆ ಕಾಣುತ್ತಿಲ್ಲ). ಅಧಿಕಾರ ನಡೆಸುತ್ತೀರಿ. ಅಧಿಕಾರದ ಕುರ್ಚಿಯ ಮೇಲೆ ಕುಳಿತಿದ್ದೀರಿ. ಆ ಕುರ್ಚಿಯ ಕೆಳಗೆ ಬೆಂಕಿ ಹತ್ತಿಕೊಂಡಿದೆ. ತ್ಯಾಗದ ಸಂದರ್ಭ ಬಂದಾಗ, ವಿಧಾನಸಭೆಯ ವಿಸರ್ಜನೆಯ ಸಂದರ್ಭ ಬಂದಾಗ ಶಾಸಕರ ರಾಜಿನಾಮೆಯ ಸಂದರ್ಭ ಬಂದಾಗ

ಯಾರು ರಾಜಿನಾಮೆಕೊಡಲು ಸಿದ್ಧರಿದ್ದಾರೆ? ಜನಸಂಘದಿಂದ ಹೆಚ್ಚು ಜನರು ರಾಜಿನಾಮೆ ಕೊಡುತ್ತಾರೆ. ಸೋಷಲಿಸ್ಟ್ ಪಾರ್ಟಿಯ ಸ್ವಲ್ಪವೇ ಜನ ಅಂದರೆ ಅರ್ಧಕ್ಕಿಂತ ಕಡಿಮೆ ಜನರು ಸಿದ್ಧರಿದ್ದಾರೆಂದು ಅನಿಸುತ್ತದೆ. ಸಮಾಜವಾದಿ ಸೋಷಲಿಸ್ಟ್ ಪಾರ್ಟಿಯದು ಇದೇಸ್ಥಿತಿ ಇರುವಂತೆ ತೋರತ್ತದೆ. ಕಾಂಗ್ರೆಸ್(ಒ)ದ ಸ್ಥಿತಿ ಒಬ್ಬ ಸದಸ್ಯನೂ ಮುಂದೆ ಬಂದಿಲ್ಲ. ತಾರಕೇಶ್ವರಿ ಸಿನ್ಹ ವಿಧಾನಸಭೆಯ ವಿಘಟನೆ ಆದನಂತರ ಏನಾಗುವುದೆಂದು ಕೇಳುತ್ತಿದ್ದಾರೆ. ಇದರ ಉತ್ತರವನ್ನು ನಾನು ನನ್ನ ಒಂದು ಲೇಖನದಲ್ಲಿ ಬರೆದಿದ್ದೇನೆ. ಅದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾಗಿದೆ, ಎವರಿ ಮ್ಯಾನ್ಸ್‌ದಲ್ಲಿ ಪ್ರಕಟವಾಗಿದೆ. ಈ ಬಗ್ಗೆ ನಾನು ಮುಂದೆ ಹೇಳುವವನಿದ್ದೇನೆ. ಈಗ ಈ ಸಂದರ್ಭದಲ್ಲಿ ಇಷ್ಟೇ ಹೇಳಬಯಸುತ್ತೇನೆ. ಏನೆಂದರೆ ಈ ವಿಷಯವನ್ನು ನಾನೇ ಎತ್ತಿದೆ ಮತ್ತು ಗುಜರಾತಿನ ಹುಡುಗರು ಡೆಸಲ್ಯೂಷನ್ ಡೆಸಲ್ಯೂಷನ್ ಎಂದು ಪದೇ ಪದೇ ಹೇಳಿದರು. ವಾಟ್‌ಆಫ್ಟರ್ ಡೆಸಲ್ಯೂಷನ್ – ವಿಸರ್ಜನೆಯ ನಂತರ ಏನಾಗುವುದು? ಪುನಃ ಇದೇ ರೀತಿ ಚುನಾವಣೆಯಾಗುವುದಲ್ಲವೆ? ಪುನಃ ಅದೇ ಜನ ಉಮೇದುವಾರರಾಗಿ ನಿಲ್ಲುವರಲ್ಲವೆ? ಪುನಃ ಅದೇ ಸಂಗತಿ ರಿಪೀಟ್ ಆಗುವುದಲ್ಲವೆ? ಇತಿಹಾಸ ಪುನಃ ಮರುಕಳುಹಿಸುವುದು. ಇದರಿಂದ ಏನು ಲಾಭ?. ವಿದ್ಯಾರ್ಥಿಗಳಿಗೆ ನಾನು ಹೇಳಿದ್ದೇನೆಂದರೆ ಪರ್ಯಾಯ ವ್ಯವಸ್ಥೆಯನ್ನು ಉಂಟುಮಾಡುವುದಕ್ಕಾಗಿ ಒಂದು ವರ್ಷದ ಮಟ್ಟಿಗೆಯಾದರೂ ಕಾಲೇಜನ್ನು ಬಿಟ್ಟುಬರಬೇಕು. ಆ ಒಂದು ವರ್ಷ ಆಂದೋಲನದಲ್ಲಿ ತೊಡಗಿಸಬೇಕು. ಯೂನಿವರ್ಸಿಟಿ ಕಾಲೇಜುಗಳು ಒಂದು ವರ್ಷ ಮುಚ್ಚಿರುವವು. ಒಂದು ವರ್ಷ ಪರೀಕ್ಷೆಗಳು ಇರುವುದಿಲ್ಲ. ಕೇವಲ ಒಂದುವರ್ಷ ಸಾಕು. ಒಂದು ವರ್ಷದಲ್ಲಿ ಜನತೆಯ ನಿಜವಾದ ರಾಜ್ಯವಾಗುವುದು. ಒಂದು ವರ್ಷದಲ್ಲಿ ಶಿಕ್ಷಣದ ನಿಜವಾದ ಸ್ವರೂಪ ಹೊರಹೊಮ್ಮುವುದು. ಇದಕ್ಕಿಂತ ಹೆಚ್ಚು ನಾನು ಕೇಳುವುದಿಲ್ಲ. ಗಾಂಧೀಜಿ ಜೀವನವನ್ನೇ ಕೇಳಿದ್ದರು. ನಾವು ಅಸಹಯೋಗ ಮಾಡಿದಾಗ ಅದು ಪೂರ್ಣಸಮಯದವರೆಗೆ ಇತ್ತು. ನೀವು ಅಸಹಯೋಗವನ್ನು ಪೂರ್ಣಸಮಯಕ್ಕೆ ಮಾಡಿರಿ ಎಂದು ಹೇಳುವುದಿಲ್ಲ. ಒಂದುವರ್ಷ ಕೊಡಿರಿ – ಹೊಸದೇಶ ನಿರ್ಮಾಣಕ್ಕಾಗಿ, ಹೊಸಬಿಹಾರ ನಿರ್ಮಾಣಮಾಡುವುದಕ್ಕಾಗಿ. ಈ ಆಂದೋಲನ ಯುವಕರ, ವಿದ್ಯಾರ್ಥಿಗಳ, ಜನತೆಯ, ಸಾಮಾನ್ಯರ ಆಂದೋಲನ. ಜಯಪ್ರಕಾಶ್ ನಾರಾಯಣರದ್ದಲ್ಲ. ಯಾವುದೇ ಪಾರ್ಟಿಯದ್ದಲ್ಲ. ಇದರಿಂದ ಎಲ್ಲರಿಗೂ ಒಳ್ಳೆಯದಾಗುವುದು.

ಭಾರತದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ವಿಮರ್ಶಾತ್ಮಕ ಚಿಂತನೆ

- ಪ್ರಣಬ್ ಮುಖರ್ಜಿ, ಮಾನ್ಯ ರಾಷ್ಟ್ರಪತಿ

ನಮ್ಮ ಸ್ವಾತಂತ್ರ್ಯ ದಿನದ ೬೮ನೇಯ ವಾರ್ಷಿಕೋತ್ಸವದ ಮುನ್ನಾ ದಿನ ನಾನು ನಿಮಗೆ ಹಾಗೂ ಜಗತ್ತಿನೆಲ್ಲೆಡೆ ಇರುವ ಎಲ್ಲ ಭಾರತೀಯರಿಗೆ ತುಂಬು ಹೃದಯದ ಶುಭಾಶಯಗಳನ್ನು ತಿಳಿಸುತ್ತೇನೆ. ನಮ್ಮ ಸಶಸ್ತ್ರ ಪಡೆಗಳು, ಅರೆ ಮಿಲಿಟರಿ ಪಡೆಗಳು ಮತ್ತು ಆಂತರಿಕ ಭದ್ರತಾ ಪಡೆಗಳ ಸದಸ್ಯರಿಗೆ ವಿಶೇಷ ಶುಭಾಶಯಗಳನ್ನು ತಿಳಿಸುತ್ತೇನೆ. ಭಾರತದಲ್ಲಿ ಮತ್ತು ವಿದೇಶಗಳಲ್ಲಿ ನಡೆದ ಹಲವಾರು ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಕೀರ್ತಿ ಪತಾಕೆಗಳನ್ನು ಗೆದ್ದಿರುವ ನಮ್ಮೆಲ್ಲ ಕ್ರೀಡಾಪಟುಗಳನ್ನು ಸಹ ನಾನು ಅಭಿನಂದಿಸುತ್ತೇನೆ. ದೇಶಕ್ಕೆ ಹೆಮ್ಮೆಯನ್ನು ತಂದುಕೊಟ್ಟಿರುವ, ೨೦೧೪ರ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಕೈಲಾಶ್ ಸತ್ಯಾರ್ಥಿ ಅವರಿಗೆ ನನ್ನ ಅಭಿನಂದನೆಗಳು.

೧೯೪೭ ಆಗಸ್ಟ್ ೧೫ರಂದು ನಾವು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದೆವು. ಆಧುನಿಕ ಭಾರತದ ಜನನ ಐತಿಹಾಸಿಕ ಸಂಭ್ರಮದ ಗಳಿಗೆಯಾಗಿತ್ತು. ಆದರೆ, ಆ ಗಳಿಗೆಯಲ್ಲಿ ನಮ್ಮ ದೇಶದ ಉದ್ದಗಲಗಳಲ್ಲಿ ಅನುಭವಿಸಲಾದ, ಊಹಿಸಲಾಗದ ನೋವಿನ ರಕ್ತವೂ ಬೆರೆತಿತ್ತು. ಬ್ರಿಟಿಷ್ ಆಳ್ವಿಕೆಯ ವಿರುದ್ಧ ನಡೆದ ಅದ್ಭುತ ಹೋರಾಟದಲ್ಲಿ, ಕ್ಲೇಶಗಳ ನಡುವೆಯೂ ಗಟ್ಟಿಯಾಗಿದ್ದ ಆದರ್ಶಗಳು ಮತ್ತು ದೃಢ ನಂಬಿಕೆಗಳು ಒತ್ತಡಕ್ಕೆ ಒಳಗಾಗಿದ್ದವು.

ಪರಮೋನ್ನತ ನಾಯಕರ ಮಹಾನ್ ಪೀಳಿಗೆಯೊಂದು ಈ ಅಗಾಧ ಸವಾಲನ್ನೆದುರಿಸಿತು. ರೋಷವೂ ಸೇರಿದಂತೆ ಭಾವಾವೇಶದ ಒತ್ತಡದಿಂದ ನಮ್ಮ ಆದರ್ಶಗಳು ದಾರಿ ತಪ್ಪದಂತೆ ಅಥವಾ ಭ್ರಷ್ಟವಾಗದಂತೆ ಆ ಪೀಳಿಗೆಯ ವಿವೇಕ ಮತ್ತು ಪಕ್ವತೆ ಅವುಗಳನ್ನು ಉಳಿಸಿದವು. ನಮಗೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಪುನರುತ್ಥಾನಕ್ಕೆ ಸ್ಫೂರ್ತಿ ಒದಗಿಸಿದ ನಾಗರಿಕತೆಯ ಜಾಣ್ಮೆಯಿಂದ ಜನಿಸಿದ ಭಾರತದ ಹೆಮ್ಮೆ, ಆತ್ಮಗೌರವ, ಸ್ವಾಭಿಮಾನವನ್ನು ಈ ಅಸಾಧಾರಣ ಪುರುಷರು ಮತ್ತು ಮಹಿಳೆಯರು ನಮ್ಮ ಸಂವಿಧಾನದಲ್ಲಿ ಬಟ್ಟಿ ಇಳಿಸಿದರು. ಔನ್ನತ್ಯದತ್ತ ಭಾರತದ ಮುನ್ನಡೆಯನ್ನು ಪ್ರಾರಂಭಿಸಿದ ಸಂವಿಧಾನದ ಆಶೀರ್ವಾದ ನಮಗೆ ಲಭಿಸಿದೆ. ನಮ್ಮ ಪ್ರಾಚೀನ ಮೌಲ್ಯಗಳನ್ನು ಆಧುನಿಕ ಸನ್ನಿವೇಶಕ್ಕೆ ಪುನರ್ ರೂಪಿಸಿದ ಹಾಗೂ ಬಹು ಸ್ವಾತಂತ್ರ್ಯಗಳಿಗೆ ಸಾಂಸ್ಥಿಕ ರೂಪ ನೀಡಿದ ಪ್ರಜಾಪ್ರಭುತ್ವ ಈ ಸಂವಿಧಾನದ ಅತ್ಯಮೂಲ್ಯ

ಉಡುಗೊರೆಯಾಗಿತ್ತು. ಅದು ತುಳಿತಕ್ಕೊಳಗಾದವರಿಗೆ, ದಟ್ಟ ದಾರಿದ್ರ್ಯಕ್ಕೊಳಗಾದವರಿಗೆ ಸ್ವಾತಂತ್ರ್ಯವನ್ನು ಒಂದು ಜೀವಂತ ಅವಕಾಶವನ್ನಾಗಿ ಪರಿವರ್ತಿಸಿತು. ಸಾಮಾಜಿಕ ಅನ್ಯಾಯಕ್ಕೊಳಗಾಗಿದ್ದ ಲಕ್ಷಾಂತರ ಜನರಿಗೆ ಅದು ಸಮಾನತೆಯನ್ನೂ ಸಕಾರಾತ್ಮಕ ತಾರತಮ್ಯವನ್ನೂ ಒದಗಿಸಿತು ಹಾಗೂ ನಮ್ಮ ದೇಶವನ್ನು ಪ್ರಗತಿಯ ಉದಾಹರಣೆಯನ್ನಾಗಿ ಮಾಡಿರುವ ಲಿಂಗ ಕ್ರಾಂತಿಯನ್ನು ಪ್ರಾರಂಭಿಸಿತು. ಪ್ರಾಚೀನ ರೂಢಿರಿವಾಜುಗಳನ್ನು ಮತ್ತು ಕಾನೂನುಗಳನ್ನು ನಾವು ರದ್ದುಗೊಳಿಸಿದೆವು ಹಾಗೂ ಶಿಕ್ಷಣ ಮತ್ತು ಉದ್ಯೋಗಗಳ ಮೂಲಕ ಮಹಿಳೆಯರ ಜೀವನದಲ್ಲಿ ಬದಲಾವಣೆ ಉಂಟಾಗುವುದನ್ನು ಖಾತರಿಪಡಿಸಿಕೊಂಡೆವು. ನಮ್ಮ ಸಂಸ್ಥೆಗಳು ಈ ಆದರ್ಶವಾದದ ಆಧಾರಸ್ವರೂಪದ ಸೌಲಭ್ಯಗಳು.

ಅತ್ಯುತ್ತಮವಾದ ಪೂರ್ವಾರ್ಜಿತ ಆಸ್ತಿಗಳನ್ನು ಕಾಪಾಡಿಕೊಳ್ಳಲು ಅವುಗಳನ್ನು ಸತತವಾಗಿ ಗಮನಿಸಬೇಕಾಗುತ್ತದೆ. ನಮ್ಮ ಪ್ರಜಾಪ್ರಭುತ್ವದ ಸಂಸ್ಥೆಗಳು ಒತ್ತಡಕ್ಕೊಳಗಾಗಿವೆ. ಚರ್ಚೆಯ ಕ್ಷೇತ್ರಕ್ಕೆ ಬದಲಾಗಿ ನಮ್ಮ ಸಂಸತ್ತನ್ನು ಹೋರಾಟದ ಕ್ಷೇತ್ರವನ್ನಾಗಿ ಪರಿವರ್ತಿಸಲಾಗಿದೆ. ಸಂವಿಧಾನದ ಕರಡು ರಚನೆಯ ಸಮಿತಿಯ ಅಧ್ಯಕ್ಷರಾಗಿದ್ದ ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಸಂವಿಧಾನ ರಚನಾ ಸಭೆಯಲ್ಲಿ ೧೯೪೯ರ ನವೆಂಬರ್ ನಲ್ಲಿ ತಮ್ಮ ಮುಕ್ತಾಯ ಭಾಷಣದಲ್ಲಿ ಆಡಿದ ಮಾತುಗಳನ್ನು ನೆನಪು ಮಾಡಿಕೊಳ್ಳಲು ಇದು ಸಕಾಲವಾಗಿದೆ ಹಾಗೂ ಅವರ ಮಾತುಗಳನ್ನು ನಾನು ಇಲ್ಲಿ ಉಲ್ಲೇಖಿಸುತ್ತೇನೆ. ಒಂದು ಸಂವಿಧಾನದ ನಿರ್ವಹಣೆ ಸಂಪೂರ್ಣವಾಗಿ ಅದರ ಸ್ವರೂಪವನ್ನೇ ಅವಲಂಬಿಸಿರುವುದಿಲ್ಲ. ಸಂವಿಧಾನ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದಂತಹ ರಾಜ್ಯಾಧಿಕಾರದ ಅಂಗಗಳನ್ನು ಮಾತ್ರ ಒದಗಿಸಬಲ್ಲದು. ಈ ಅಂಗಗಳ ಕಾರ್ಯನಿರ್ವಹಣೆ ಯಾವ ಅಂಶಗಳ ಆಧಾರದ ಮೇಲೆ ನಡೆಯುತ್ತದೆ ಎನ್ನುವುದು ಜನರನ್ನು ಹಾಗೂ ತಮ್ಮ ಇಷ್ಟಾರ್ಥಗಳು ಮತ್ತು ತಮ್ಮ ರಾಜಕೀಯ ಉದ್ದೇಶಗಳನ್ನು ಈಡೇರಿಸುವ ಸಾಧನಗಳನ್ನಾಗಿ ಜನರು ರಚಿಸುವ ರಾಜಕೀಯ ಪಕ್ಷಗಳನ್ನು ಅವಲಂಬಿಸಿದೆ. ಭಾರತದ ಜನತೆ ಹಾಗೂ ಅವರು ರಚಿಸುವ ರಾಜಕೀಯ ಪಕ್ಷಗಳು ಹೇಗೆ ವರ್ತಿಸುತ್ತವೆ ಎಂದು ಯಾರು ತಾನೇ ಹೇಳಬಲ್ಲರು? ಉಲ್ಲೇಖ ಮುಗಿಯಿತು. ಪ್ರಜಾಪ್ರಭುತ್ವದ ಸಂಸ್ಥೆಗಳು ಒತ್ತಡದಲ್ಲಿದ್ದರೆ, ಜನತೆ ಮತ್ತು ಅವರ ಪಕ್ಷಗಳು ಗಂಭೀರವಾಗಿ ಯೋಚಿಸಬೇಕಾದ ಸಮಯ ಬಂದಿದೆ. ತಿದ್ದುಪಡಿಗಳು ಆಂತರಿಕವಾಗಿಯೇ ಮೂಡಿ ಬರಬೇಕು.

ನಮ್ಮ ದೇಶದ ಏಳಿಗೆಯನ್ನು ನಮ್ಮ ಮೌಲ್ಯಗಳ ಬಲದಿಂದ ಅಳೆಯಲಾಗುವುದಾದರೂ ಆರ್ಥಿಕ ಬೆಳವಣಿಗೆ ಹಾಗೂ ದೇಶದ ಸಂಪನ್ಮೂಲಗಳ ಸಮಾನ ಹಂಚಿಕೆಯಿಂದಲೂ ಅದನ್ನು ನಿರ್ಧರಿಸಲಾಗುವುದು. ನಮ್ಮ ಆರ್ಥಿಕತೆ ಭವಿಷ್ಯದ ಬಗ್ಗೆ ಬಹಳಷ್ಟು ಭರವಸೆಯನ್ನು ನೀಡುತ್ತದೆ. ಭಾರತದ ಕಥೆಯ ಹೊಸ

ಅಧ್ಯಾಯಗಳನ್ನು ಬರೆಯಬೇಕಾಗಿದ್ದು, ಅವುಗಳಿಗಾಗಿ ಕಾಯಲಾಗುತ್ತಿದೆ. ಆರ್ಥಿಕ ಸುಧಾರಣೆಗಳು ಹಾಲಿ ಜಾರಿಯಲ್ಲಿರುವ ಕಾರ್ಯ. ಕಳೆದ ದಶಕದಲ್ಲಿ ನಮ್ಮ ಸಾಧನೆ ಶ್ಲಾಘನೀಯವಾಗಿದೆ. ಒಮ್ಮೆ ಕೆಳಮುಖವಾಗಿದ್ದ ನಮ್ಮ ಆರ್ಥಿಕ ಬೆಳವಣಿಗೆಯ ಪ್ರಮಾಣ ೨೦೧೪–೧೫ರ ಸಾಲಿನಲ್ಲಿ ಶೇಕಡ ೭.೩ಕ್ಕೆ ಚೇತರಿಸಿಕೊಂಡಿದೆ. ಆದರೆ ಈ ಬೆಳವಣಿಗೆಯ ಅನುಕೂಲಗಳು ಶ್ರೀಮಂತರಲ್ಲಿ ಅತಿ ಶ್ರೀಮಂತರ ಬ್ಯಾಂಕ್ ಖಾತೆಗಳಿಗೆ ಸೇರುವುದಕ್ಕೆ ಮೊದಲೇ ಬಡವರಲ್ಲಿ ಅತಿ ಬಡವರಿಗೆ ತಲುಪಬೇಕು. ಎಲ್ಲರನ್ನೂ ಒಳಗೊಳ್ಳುವ ಪ್ರಜಾಪ್ರಭುತ್ವ ಎಲ್ಲರನ್ನೂ ಒಳಗೊಳ್ಳುವ ಆರ್ಥಿಕತೆ ನಮ್ಮದು. ಸಂಪತ್ತಿನ ಶ್ರೇಣಿಯಲ್ಲಿ ಎಲ್ಲರಿಗೂ ಸ್ಥಾನವಿದೆ. ನಿರ್ಗತಿಕತೆಯ ಅಂಚಿನಲ್ಲಿ ಸಂಕಷ್ಟದಲ್ಲಿರುವವರಿಗೆ ಸಹಾಯದ ಮೊದಲ ಕರೆ ಹೋಗುತ್ತದೆ. ಮುಂಗಾಣಬಹುದಾದ ಭವಿಷ್ಯದಲ್ಲಿ ಶೂನ್ಯ ಹಸಿವಿನ ಸವಾಲನ್ನೆದುರಿಸಲು ನಮ್ಮ ನೀತಿಗಳು ಸಜ್ಜುಗೊಳ್ಳಬೇಕು. ಮನುಷ್ಯ ಮತ್ತು ಪ್ರಕೃತಿಯ ನಡುವಣ ಸಹಬಾಳ್ವೆಯ ಸಂಬಂಧವನ್ನು ಕಾಪಾಡಿಕೊಳ್ಳಬೇಕು. ಔದಾರ್ಯದ ಪ್ರಕೃತಿಯನ್ನು ಉಲ್ಲಂಘಿಸಿದಾಗ ಅದು ವಿನಾಶಕ ಶಕ್ತಿಯಾಗಿ ಜನರ ಜೀವಗಳು ಮತ್ತು ಆಸ್ತಿ ಪಾಸ್ತಿಗಳಿಗೆ ಅಪಾರ ನಷ್ಟ ಉಂಟು ಮಾಡುವ ವಿಕೋಪಗಳಿಗೆ ದಾರಿಯಾಗಬಹುದು. ನಾನು ಮಾತನಾಡುತ್ತಿರುವ ಸಮಯದಲ್ಲೇ ದೇಶದ ದೊಡ್ಡ ಭಾಗಗಳು ಪ್ರವಾಹದಿಂದ ಒಂದಿಷ್ಟು ಚೇತರಿಸಿಕೊಳ್ಳುತ್ತಿವೆ. ಸಂತ್ರಸ್ತ ಜನರಿಗೆ ತಕ್ಷಣದ ಪರಿಹಾರ ನಾವು ಒದಗಿಸಬೇಕಾಗಿದೆ ಹಾಗೂ ನೀರಿನ ಕೊರತೆ ಮತ್ತು ಆಧಿಕ್ಯ– ಇವೆರಡರ ನಿರ್ವಹಣೆಗೆ ದೀರ್ಘಾವಧಿ ಪರಿಹಾರಗಳ ಅಗತ್ಯವೂ ಇದೆ.

ತನ್ನ ಗತಕಾಲದ ಆದರ್ಶವನ್ನು ಮರೆಯುವ ಒಂದು ದೇಶ ತನ್ನ ಭವಿಷ್ಯದಿಂದ ಏನೋ ಅಮೂಲ್ಯವಾದದ್ದನ್ನು ಕಳೆದುಕೊಳ್ಳುತ್ತದೆ. ಪೂರೈಕೆಗಳನ್ನು ಮೀರಿ ಪೀಳಿಗೆಗಳ ಆಶೋತ್ತರಗಳು ಬೆಳೆಯುತ್ತಲೇ ಇರುವಾಗ ನಮ್ಮ ಶೈಕ್ಷಣಿಕ ಸಂಸ್ಥೆಗಳ ಸಂಖ್ಯೆಯೂ ಬೆಳೆಯುತ್ತಿದೆ. ಆದರೆ ತಳದಿಂದ ಶಿಖರದವರೆಗೆ ಗುಣಮಟ್ಟಕ್ಕೆ ಏನಾಗಿದೆ? ನ್ಯಾಯಯುತವಾದ ಹೆಮ್ಮೆಯಿಂದ ನಾವು ಗುರು–ಶಿಷ್ಯ ಪರಂಪರೆಯನ್ನು ನೆನಪು ಮಾಡಿಕೊಳ್ಳುತ್ತೇವೆ. ಹಾಗಿದ್ದಾಗ ಇಂತಹ ಸಂಬಂಧದ ಹೃದಯವೇ ಆಗಿರುವ ಪೋಷಣೆ, ನಿಷ್ಠೆ ಮತ್ತು ಬದ್ಧತೆಗಳನ್ನು ನಾವು ಏಕೆ ಕೈಬಿಟ್ಟಿದ್ದೇವೆ. ಕುಂಬಾರ ಮೃದುವಾದ ಮತ್ತು ಕೌಶಲ್ಯದ ಕೈಗಳಿಂದ ಮಣ್ಣಿನ ಪಾತ್ರೆಯನ್ನು ರೂಪಿಸುವ ರೀತಿಯಲ್ಲೇ, ಒಬ್ಬ ಗುರು ಶಿಷ್ಯನ ಭವಿಷ್ಯವನ್ನು ರೂಪಿಸುತ್ತಾನೆ. ವಿದ್ಯಾರ್ಥಿ ಶ್ರದ್ಧೆ ಮತ್ತು ನಮ್ರತೆಯಿಂದ ಶಿಕ್ಷಕನಿಗೆ ತನ್ನ ಋಣವನ್ನು ಒಪ್ಪಿಕೊಳ್ಳುತ್ತಾನೆ. ಸಮಾಜ ಶಿಕ್ಷಕನ ಹಿರಿಮೆ ಮತ್ತು ಪಾಂಡಿತ್ಯವನ್ನು ಮನಗಾಣುತ್ತದೆ ಮತ್ತು ಗೌರವಿಸುತ್ತದೆ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇದು ಇಂದು ನಡೆಯುತ್ತಿದೆಯೇ? ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಅಧಿಕಾರಿಗಳು ಸ್ವಲ್ಪ ನಿಂತು ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು.

ನಮ್ಮ ಪ್ರಜಾಪ್ರಭುತ್ವ ಅನೇಕವಾಗಿರುವುದರಿಂದ ಸೃಜನಾತ್ಮಕವಾಗಿದೆ, ಆದರೆ ವೈವಿಧ್ಯತೆಯನ್ನು ಸಹನೆ ಮತ್ತು ತಾಳ್ಮೆಯಿಂದ ಪೋಷಿಸಬೇಕು. ಹಲವು ಶತಮಾನಗಳ ಜಾತ್ಯತೀತತೆಯನ್ನು ಶಿಥಿಲಗೊಳಿಸುವ ಪ್ರಯತ್ನದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಸಾಮಾಜಿಕ ಸಾಮರಸ್ಯವನ್ನು ಕದಡುತ್ತಲೇ ಇರುತ್ತವೆ. ಸದಾ ಬದಲಾಗುತ್ತಿರುವ ತಂತ್ರಜ್ಞಾನದ ಮೂಲಕ, ದಿಢೀರ್ ಸಂಪರ್ಕ ಸಾಧಿಸಬಹುದಾದ ಯುಗದಲ್ಲಿ, ಕೆಲವೇ ವ್ಯಕ್ತಿಗಳ ದುಷ್ಟ ಸಂಚುಗಳು ನಮ್ಮ ಜನತೆಯ ಮೂಲಭೂತ ಏಕತೆಯ ವಿರುದ್ಧ ಎಂದೂ ಮೇಲುಗೈ ಸಾಧಿಸದೆ ಇರುವುದನ್ನು ಖಚಿತಪಡಿಸಿಕೊಳ್ಳಲು ನಾವು ಜಾಗರೂಕತೆಯಿಂದ ಇರಲೇಬೇಕು. ಸರ್ಕಾರ ಹಾಗೂ ಜನತೆಗೆ ಕಾನೂನಿನ ಆಡಳಿತ ಪರಮ ಪವಿತ್ರವಾದದ್ದಾದರೂ, ಸಮಾಜವನ್ನು ಕಾನೂನಿಗಿಂತ ದೊಡ್ಡದಾದ ಯಾವುದೋ ಶಕ್ತಿಯೂ ಕಾಪಾಡುತ್ತಿದೆ. ಮಹಾತ್ಮಗಾಂಧಿಯವರು ಹೇಳಿದ ಮಾತುಗಳನ್ನು ನಾನಿಲ್ಲಿ ಉಲ್ಲೇಖಿಸುತ್ತೇನೆ. "ನೀವು ಮಾನವೀಯತೆಯಲ್ಲಿ ವಿಶ್ವಾಸ ಕಳೆದುಕೊಳ್ಳಬಾರದು, ಮಾನವೀಯತೆ ಒಂದು ಸಾಗರದಂತೆ. ಸಾಗರದ ಕೆಲವು ಹನಿಗಳು ಕೊಳಕಾಗಿದ್ದರೆ ಸಾಗರ ಕೊಳಕಾಗುವುದಿಲ್ಲ."

ಶಾಂತಿ, ಮೈತ್ರಿ ಮತ್ತು ಸಹಕಾರ ದೇಶಗಳನ್ನು ಮತ್ತು ಜನತೆಯನ್ನು ಒಟ್ಟಾಗಿ ಬೆಸೆಯುತ್ತವೆ. ಭಾರತೀಯ ಉಪಖಂಡದ ಹಂಚಿಕೊಂಡ ಭವಿಷ್ಯವನ್ನು ಮನಗಂಡು ನಾವು ಸಂಪರ್ಕವನ್ನು ಬಲಪಡಿಸಬೇಕು. ಸಾಂಸ್ಥಿಕ ಸಾಮರ್ಥ್ಯವನ್ನು ವಿಸ್ತರಿಸಬೇಕು ಹಾಗೂ ಪ್ರಾದೇಶಿಕ ಸಹಕಾರವನ್ನು ವೃದ್ಧಿಸಲು ಪರಸ್ಪರ ನಂಬಿಕೆಯನ್ನು ಬೆಳೆಸಬೇಕು, ನಮ್ಮ ಹಿತಾಸಕ್ತಿಗಳನ್ನು ಜಾಗತಿಕವಾಗಿ ಮುನ್ನಡೆಸುವಲ್ಲಿ ನಾವು ಪ್ರಗತಿ ಸಾಧಿಸುತ್ತಿರುವಾಗಲೇ, ನಮ್ಮ ನೆರೆದೇಶಗಳಲ್ಲಿ ಸೌಹಾರ್ದತೆ ಮತ್ತು ಅಭ್ಯುದಯಕ್ಕೆ ಉತ್ತೇಜನ ನೀಡಲು ಸಹ ಭಾರತ ಸಕ್ರಿಯವಾಗಿ ತೊಡಗಿದೆ. ಬಾಂಗ್ಲಾದೇಶದೊಡನೆ ದೀರ್ಘಕಾಲದಿಂದ ಇತ್ಯರ್ಥವಾಗದೆ ಇದ್ದ ಭೂಗಡಿ ಸಮಸ್ಯೆಯನ್ನು ಅಂತಿಮವಾಗಿ ಬಗೆಹರಿಸಿರುವುದು ಸಂತಸದ ವಿಷಯವೇ.

ನಾವು ಸ್ನೇಹಹಸ್ತವನ್ನು ಸ್ವ-ಇಚ್ಛೆಯಿಂದಲೇ ಚಾಚುತ್ತೇವಾದರೂ, ಉದ್ದೇಶಪೂರ್ವಕ ಪ್ರಚೋದನಾ ಕೃತ್ಯಗಳು ಹಾಗೂ ಹದಗೆಡುತ್ತಿರುವ ಭದ್ರತಾ ಪರಿಸ್ಥಿತಿಯ ಬಗ್ಗೆ ನಾವು ಕಣ್ಣು ಮುಚ್ಚಿಕೊಂಡಿರಲಾಗದು. ಗಡಿಯಾಚೆಯಿಂದ ಕಾರ್ಯಾಚರಣೆ ನಡೆಸುತ್ತಿರುವ ಕಟುಕ ಭಯೋತ್ಪಾದಕ ಗುಂಪುಗಳಿಗೆ ಭಾರತ ಗುರಿಯಾಗಿದೆ. ಹಿಂಸೆಯ ಭಾಷೆ ಮತ್ತು ಕೇಡಿನ ಪಂಥ ಬಿಟ್ಟರೆ ಈ ಭಯೋತ್ಪಾದಕರಿಗೆ ಯಾವ ಧರ್ಮವೂ ಇಲ್ಲ ಹಾಗೂ ಅವರು ಯಾವ ಸಿದ್ಧಾಂತಕ್ಕೂ ಸೇರಿದವರಲ್ಲ. ಭಾರತಕ್ಕೆ ಕೇಡೆಣಿಸುವ ಶಕ್ತಿಗಳಿಂದ ತಮ್ಮ ಭೂ ಪ್ರದೇಶ ಬಳಕೆಯಾಗದೆ ಇರುವುದನ್ನು ನಮ್ಮ ನೆರೆದೇಶಗಳು ಖಾತ್ರಿಪಡಿಸಿಕೊಳ್ಳಬೇಕು. ನಮ್ಮ ನೀತಿ ಭಯೋತ್ಪಾದನೆಗೆ ಶೂನ್ಯ ಸಹನೆ ತೋರುವ ನೀತಿಯಾಗಿಯೇ ಉಳಿಯುತ್ತದೆ. ಭಯೋತ್ಪಾದನೆಯನ್ನು

ರಾಜ್ಯಾಧಿಕಾರದ ನೀತಿಯ ಸಾಧನವನ್ನಾಗಿ ಬಳಸುವ ಯಾವುದೇ ಪ್ರಯತ್ನವನ್ನು ನಾವು ತಿರಸ್ಕರಿಸುತ್ತೇವೆ. ನಮ್ಮ ಪ್ರದೇಶದೊಳಗೆ ನುಸುಳುವುದು ಮತ್ತು ಜನರ ಹತ್ಯೆಗೆ ನಡೆಸುವ ಪ್ರಯತ್ನಗಳ ವಿರುದ್ಧ ಬಲವಾದ ಕ್ರಮ ಕೈಗೊಳ್ಳಲಾಗುವುದು.

ಭಾರತದ ರಕ್ಷಣೆಯಲ್ಲಿ ತಮ್ಮ ಪ್ರಾಣಗಳನ್ನು ಬಲಿತೆತ್ತು ಪರಮೋನ್ನತ ತ್ಯಾಗ ಮಾಡಿದ ಹುತಾತ್ಮರಿಗೆ ನಾನು ಶ್ರದ್ಧಾಂಜಲಿ ಸಲ್ಲಿಸುತ್ತೇನೆ. ನಮ್ಮ ದೇಶದ ಪ್ರಾದೇಶಿಕ ಸಮಗ್ರತೆಯನ್ನು ಮತ್ತು ನಮ್ಮ ಜನತೆಯನ್ನು ರಕ್ಷಿಸಲು ನಿರಂತರ ಜಾಗರೂಕತೆ ವಹಿಸಿರುವ ನಮ್ಮ ಭದ್ರತಾ ಪಡೆಗಳ ಸಾಹಸ ಮತ್ತು ಧೈರ್ಯಕ್ಕೆ ನಾನು ವಂದಿಸುತ್ತೇನೆ. ತಮ್ಮ ಪ್ರಾಣಗಳಿಗೆ ಇದ್ದ ಅಪಾಯವನ್ನೂ ಲೆಕ್ಕಿಸದೆ ಕಟ್ಟಾ ಭಯೋತ್ಪಾದಕನನ್ನು ಧೈರ್ಯದಿಂದ ಬಂಧಿಸಿದ ಸಾಹಸಿ ನಾಗರಿಕರನ್ನು ನಾನು ವಿಶೇಷವಾಗಿ ಪ್ರಶಂಸಿಸುತ್ತೇನೆ. ಭಾರತ ೧೩೦ ಕೋಟಿ ಜನರು, ೧೨೨ ಭಾಷೆಗಳು, ೧೬೦೦ ಉಪಭಾಷೆಗಳು ಮತ್ತು ೭ ಪ್ರಮುಖ ಮತಧರ್ಮಗಳನ್ನುಳ್ಳ ಸಂಕೀರ್ಣ ದೇಶ. ಅದರ ಬಲ ಮೇಲ್ನೋಟಕ್ಕೆ ಕಾಣುವ ವಿರೋಧಾಭಾಸಗಳನ್ನು ಸಕಾರಾತ್ಮಕ ಸತ್ಯಾಂಶಗಳನ್ನಾಗಿ ಪರಿವರ್ತಿಸುವ ಅದರ ವಿಶಿಷ್ಟ ಸಾಮರ್ಥ್ಯದಲ್ಲಿ ಅಡಗಿದೆ. ಪಂಡಿತ್ ಜವಹರಲಾಲ್ ನೆಹರು ಅವರ ಮಾತುಗಳನ್ನು ನಾನಿಲ್ಲಿ ಉಲ್ಲೇಖಿಸುತ್ತೇನೆ. "ಬಲವಾದ, ಆದರೆ, ಕಣ್ಣಿಗೆ ಕಾಣದ ದಾರಗಳಿಂದ ಒಟ್ಟಿಗೆ ಕಟ್ಟಿರುವ ದೇಶ ಭಾರತ, ಬಹಳ ಹಿಂದಿನ ಕಾಲದ ದಂತಕಥೆಯೊಂದರ ಅರಿವಿಗೆ ಸಿಗದ ಗುಣವೊಂದು ಈ ದೇಶದಲ್ಲಿದೆ. ಯಾವುದೋ ಮೋಡಿ ಅದರ ಮನಸ್ಸಿನಲ್ಲಿ ತುಂಬಿದೆ. ಈ ದೇಶ ಒಂದು ಮಿಥ್ ಮತ್ತು ಒಂದು ಆಲೋಚನೆ, ಒಂದು ಕನಸು ಮತ್ತು ಒಂದು ದರ್ಶನ. ಇಷ್ಟಾದರೂ ಬಹಳ ನಿಜವಾದ, ಕಣ್ಣ ಮುಂದಿರುವ ಮತ್ತು ಎಲ್ಲೆಡೆ ವ್ಯಾಪಿಸಿರುವ ದೇಶ ಇದು.

ನಮ್ಮ ಸಂವಿಧಾನ ರಚಿಸಿರುವ ಸಮೃದ್ಧ ಭೂಮಿಯಲ್ಲಿ ಭಾರತ ಒಂದು ಚೈತನ್ಯಶಾಲಿ ಪ್ರಜಾಪ್ರಭುತ್ವವಾಗಿ ಅರಳಿದೆ. ಬೇರುಗಳು ಆಳವಾಗಿವೆಯಾದರೂ ಎಲೆಗಳು ಬಾಡಲಾರಂಭಿಸಿವೆ. ನವಚೈತನ್ಯಕ್ಕೆ ಇದು ಸಕಾಲ.

ನಾವೀಗ ಕಾರ್ಯಪ್ರವೃತ್ತರಾಗದಿದ್ದರೆ, ಏಳು ದಶಕಗಳ ನಂತರದ ನಮ್ಮ ಉತ್ತರಾಧಿಕಾರಿಗಳು, ೧೯೪೭ರಲ್ಲಿ ಭಾರತದ ಕನಸನ್ನು ರೂಪಿಸಿದವರ ಬಗ್ಗೆ ನಾವು ಹೊಂದಿರುವ ಗೌರವ ಮತ್ತು ಮೆಚ್ಚುಗೆಗಳಿಂದ ನಮ್ಮನ್ನು ನೆನಪು ಮಾಡಿಕೊಳ್ಳುತ್ತಾರೆಯೇ? ಉತ್ತರ ಸಮಾಧಾನಕರವಿಲ್ಲದೆ ಇರಬಹುದು. ಆದರೆ ಪ್ರಶ್ನೆಯನ್ನು ಕೇಳಬೇಕಾಗಿದೆ.

ಧನ್ಯವಾದಗಳು,

ಜೈಹಿಂದ್

ಕನ್ನಡಕ್ಕೆ : ಬಿ.ಎನ್.ಗುರುಮೂರ್ತಿ
ಕೃಪೆ : ಆಕಾಶವಾಣಿ

ಅಣುಯುಗದಲ್ಲಿ ಅಹಿಂಸೆ ಅನಿವಾರ್ಯ

ಮೂಲ – ವಿನೋಬಾ   ಅನು – ಸುರೇಂದ್ರ ಕೌಲಗಿ

(೧೮೯೫ ಸೆಪ್ಟೆಂಬರ್ ೧೧ ಆಚಾರ್ಯ ವಿನೋಬಾ ಭಾವೆಯವರ ಜನ್ಮದಿನ. ಭೂದಾನ ಆಂದೋಲನ ಪ್ರವರ್ತಕರಾಗಿ, ಗ್ರಾಮದಾನದ ಚಿಂತಕರಾಗಿ ಮತ್ತು ಗ್ರಾಮರಾಜ್ಯದ ಪ್ರತಿಪಾದಕರಾಗಿ. ಭಾರತದಾದ್ಯಂತ ೧೪ವರ್ಷ ಪಾದಯಾತ್ರೆಮಾಡಿ ಗಾಂಧೀಜಿಯವರ ಸರ್ವೋದಯ ಸಮಾಜದ ಕಲ್ಪನೆಯನ್ನು ಸಾಕಾರಗೊಳಿಸಲು ಧರ್ಮ ಚಕ್ರವನ್ನು ತಿರುಗಿಸಿದವರು ವೀರ ಮತ್ತು ಸಂತ ವಿನೋಬಾ. ಅವರ ಜನ್ಮದಿನದ ಸವಿನೆನಪಿನಲ್ಲಿ ಈ ಲೇಖನ – ಸಂ)

ಜಗತ್ತಿನಲ್ಲಿ ಮತ್ತು ಭಾರತದಲ್ಲಿ ಸಂತ ಪುರುಷರು ಯಾವಾಗಲು ಬರುತ್ತಲೇ ಇದ್ದಾರೆ. ಸತ್ಪುರುಷರು ಬರುತ್ತಲೇ ಇದ್ದಾರೆ. ಅವರು ಜನರಿಗೆ ಆಧ್ಯಾತ್ಮಿಕ ಮೌಲ್ಯವನ್ನು ತಿಳಿಹೇಳುತ್ತಲಿದ್ದಾರೆ. ಜನರು ಅವರ ಮಾತನ್ನು ಆಲಿಸುತ್ತಲೇ ಇದ್ದಾರೆ. ಎಷ್ಟು ಅರ್ಥಮಾಡಿಕೊಳ್ಳಲು ಸಾಧ್ಯವೋ ಅಷ್ಟುಅರ್ಥಮಾಡಿಕೊಳ್ಳುತ್ತಿದ್ದಾರೆ. ಎಷ್ಟು ಆಚರಣೆಮಾಡಲು ಸಾಧ್ಯವೋ ಅಷ್ಟು ಆಚರಣೆಮಾಡುತ್ತಿದ್ದಾರೆ. ಆಚರಿಸಲು ಆಗದಿದ್ದಾಗ ಅದು ತಮ್ಮ ಅಸಾಮರ್ಥ್ಯವೆಂದು ತಿಳಿದು ಮೌಲ್ಯಗಳನ್ನು ಆದರಿಸುತ್ತಿದ್ದಾರೆ. ಮತ್ತು ಅವು ವ್ಯವಹಾರದಲ್ಲಿ ನಡೆಯುವುದಿಲ್ಲವೆಂದು ತಿಳಿಯುತ್ತಿದ್ದಾರೆ.

ಯುಗದ ಬೇಡಿಕೆ ಹಾಗೂ ಸಂತರ ಉಪದೇಶದ ಸಂಯೋಗವಾದಾಗ ಕ್ರಾಂತಿ ಹುಟ್ಟುತ್ತದೆ. ಗಾಂಧೀಜಿಯವರ ಬಗ್ಗೆ ನಮಗೆ ಇದೇ ನೋಡಲು ದೊರೆತಿದೆ. "ಹಿಂಸೆಯ ಪ್ರತೀಕಾರವನ್ನು ಅಹಿಂಸೆಯಿಂದ ಮಾಡಿ ಅಸತ್ಯದ ಪ್ರತೀಕಾರವನ್ನು ಸತ್ಯದಿಂದಮಾಡಿ ಎಂದು ಗಾಂಧೀಜಿ ಹೇಳಿದರು". ಅವರು ನಿಶಸ್ತ್ರವಾಗಿ ಪ್ರತೀಕಾರ ಹೇಗೆಮಾಡುವುದೆಂಬುದನ್ನು ಕಲಿಸಿದರು. ಹಾಗೆ ನೋಡಿದರೆ, ಇದು ಒಂದು ಪುರಾತನಮಾತು. ಹೊಸ ಮಾತೇನಲ್ಲ. ಇದು ಭಾರತದ ಸಂಸ್ಕೃತಿಯದೇ ಒಂದು ಹೂಅರಳಿ ಹಣ್ಣಾದ ಸ್ವರೂಪ. ಬುದ್ಧ, ಮಹಾವೀರ ಹಾಗೂ ಇನ್ನು ಬೇರೆ ಸಂತರು ನಮಗೆ ಇದನ್ನೇ ಕಲಿಸಿದ್ದರು. ಕಿಂತು ಯಾವಾಗ ಈ ಮಾತು ಗಾಂಧೀಜಿಯವರ ಮುಖದಿಂದ ಹೊರಟಿತೊ ಅದರ ಒಂದು ಕ್ರಾಂತಿಕಾರಿ ಅರ್ಥಪ್ರಕಟವಾಯಿತು. ಯಾಕೆಂದರೆ ಅದಕ್ಕಾಗಿ ಐತಿಹಾಸಿಕ ಭೂಮಿಕೆ ಸಿದ್ಧವಾಗಿತ್ತು.

ಇಂಗ್ಲೀಷರು ಇಲ್ಲಿಗೆ ಬಂದರು ಮತ್ತು ಅವರು ನಮ್ಮಿಂದ ನಮ್ಮ ಆಯುಧಗಳನ್ನು ಕಿತ್ತುಕೊಂಡರು. ಅವರು ಭಾರತದ ಜನತೆಯನ್ನು ಪೂರ್ಣವಾಗಿ ನಿಶಸ್ತ್ರಮಾಡಿದರು.

ಈ ಮೊದಲು ಯಾವುದೇ ರಾಜ ಎಲ್ಲಿಯೂ ಹೀಗೆ ಮಾಡಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಭಾರತದ ಎದುರಿಗೆ ಒಂದು ದೊಡ್ಡ ಪ್ರಶ್ನೆ ನಿಂತಿತು. ಆ ಪ್ರಶ್ನೆ : ಸದಾಕಾಲ ಇಂಗ್ಲೀಷರ ಗುಲಾಮರಾಗಿರಬೇಕೇ ಅಥವಾ ಯಾವುದಾದರೊಂದು ಹೊಸ ಹೆಚ್ಚು ಶಕ್ತಿಶಾಲಿ ಶಸ್ತ್ರವನ್ನು ಹುಡುಕಿತೆಗೆಯಬೇಕೇ. ಇಷ್ಟು ದೊಡ್ಡದೇಶ ಸದಾಕಾಲ ಗುಲಾಮವಾಗಿ ಇರುವುದು ಅಸಂಭವವಾಗಿತ್ತು. ಈ ಕಾರಣದಿಂದಾಗಿ ನಿಶಸ್ತ್ರಮಾರ್ಗದಿಂದ ಹೋರಾಟಮಾಡುವ ದಾರಿಯನ್ನು ಕಂಡುಹಿಡಿಯುವ ಒಂದು ಐತಿಹಾಸಿಕ ಅವಶ್ಯಕತೆ ಉಂಟಾಯಿತು. ಇದರ ಹೊರಸ್ವರೂಪವಾಗಿಯೇ ಮಹಾತ್ಮಗಾಂಧಿ ಬಂದರು. ಅವರು ಬಾರದೇ ಹೋಗಿದ್ದರೆ ಇನ್ನೂ ಯಾರಾದರು ಬಂದಿರುತ್ತಿದ್ದರು. ಗಾಂಧೀ ದೇಶದ ಎದುರಿಗೆ ಒಂದು ಹೊಸ ದರ್ಶನವನ್ನು ಗಾಂಧೀ ಇಟ್ಟರು. ಇಡೀ ಜಗತ್ತಿನ ದುಃಖಗಳ ನಿವಾರಣೆಮಾಡಲು ಸಾಧ್ಯವಾಗುವಂಥ ವಿಶಿಷ್ಟ ಪ್ರಕಾರದ ಪ್ರತೀಕಾರದಮಾರ್ಗ ಅದಾಗಿತ್ತು.

ಅವರ ವಿಚಾರ ಇಡೀ ದೇಶದಲ್ಲಿ ಹರಡಿತು. ಮತ್ತು ಅಂಕುಡೊಂಕಾಗಿ ಅದರ ಆಚರಣೆಯೂ ಆಯಿತು. ಇಂಗ್ಲೀಷರಿಂದ ಶಸ್ತ್ರಾಸ್ತ್ರಗಳು ಕಿತ್ತುಕೊಳ್ಳಲ್ಪಟ್ಟಿದ್ದರಿಂದ ದೇಶದಲ್ಲಿ ವಿಶಿಷ್ಟ ಪರಿಸ್ಥಿತಿ ಉಂಟಾಗಿತ್ತು. ಆದ್ದರಿಂದ ಗಾಂಧೀಜಿಯವರ ಅಹಿಂಸೆಯ ಮಾತಿಗೆ ಯುಗದ ಬೇಡಿಕೆಯ ಬಲದೊರೆಯಿತು.

ಇಂಗ್ಲೀಷರ ಬಲಿಷ್ಠ ಸಾಮ್ರಾಜ್ಯವನ್ನು ಹೇಗೆ ಎದುರಿಸಬೇಕೆಂಬ ಅಹಿಂಸಕ ಯುಕ್ತಿಯನ್ನು ಗಾಂಧೀಜಿ ನಮಗೆ ಕಲಿಸಿದರು. ಅವರು ಹೇಳಿದರು : "ನಾವು ನಿರ್ವೈರ್ಯರಾಗಿಯೂ ಇರುವೆವು ಮತ್ತು ಎದುರಿಸಿಯೂ ತೀರುವೆವು". ಜಗತ್ತಿಗೆ ಒಂದು ದೊಡ್ಡ ವಿಚಾರ ದೊರೆಯಿತು. ಈ ವಿಚಾರದಲ್ಲಿ ನಿರ್ವೈರ್ಯತೆ ಮತ್ತು ಪ್ರತೀಕಾರ ವೃತ್ತಿ ಎರಡರಸಂಗಮ ಆಯಿತು. ಅದರಿಂದಾಗಿ ಸಮಾಜಕ್ಕೆ ಒಂದುಮಾರ್ಗ ತೆರೆಯಿತು. ದೊಡ್ಡ ದೊಡ್ಡ ಶಸ್ತ್ರಗಳು ನಿರುಪಯೋಗ ಆಗುವಂಥ ಯುಕ್ತಿಯನ್ನು ಗಾಂಧೀಜಿ ನಮಗೆ ಕಲಿಸಿದರು. ಇಂಗ್ಲೀಷರು ತಮ್ಮ ರಾಜ್ಯಭಾರ ನಡೆಸುವುದಕ್ಕಾಗಿ ಯಾವ ಲಕ್ಷಾಂತರ ಜನರ ಸಹಯೋಗ ಅವಶ್ಯಕವಾಗಿತ್ತೊ ಆ ಸಹಯೋಗವನ್ನು ಅವರಿಗೆ ಕೊಡದೆಹೋದರೆ ಇಂಗ್ಲೀಷರು ಎಷ್ಟೇ ಶಕ್ತಿಶಾಲಿಯಾಗಿದ್ದರೂ ಅವರ ಅಧಿಕಾರ ನಮ್ಮ ಮೇಲೆ ನಡೆಯುವುದಿಲ್ಲ. ಆಗ ಅವರು ನಮ್ಮನ್ನು ಹೊಡೆಯುವರು, ಹಿಂಸಿಸುವರು. ಆದರೂ ಕೂಡ ನಾವು ಅವರೊಂದಿಗೆ ಸಹಯೋಗಮಾಡುವುದಿಲ್ಲ. ನಾವು ಸತ್ತರೂ ಕೂಡ ಇಂಗ್ಲೀಷರ ಇಚ್ಛೆಗನುಗುಣವಾಗಿ ಕೆಲಸಮಾಡುವುದಿಲ್ಲ. ಆತ್ಮಬಲದ ಇಂಥ ಒಂದುಯುಕ್ತಿಯನ್ನು ಗಾಂಧೀಜಿ ನಮಗೆ ಕಲಿಸಿದರು.

'ಇಲ್ಲ' ಎಂದು ಹೇಳುವ ಶಕ್ತಿ ಬರಬೇಕು. ನಿಮ್ಮ ತಪ್ಪು ಕೆಲಸದಲ್ಲಿ ನಾವು ನಿಮ್ಮೊಂದಿಗೆ ಸಹಯೋಗ ಮಾಡುವುದಿಲ್ಲ ಎಂದು ಹೇಳುವ ಶಕ್ತಿ ನಮ್ಮೊಳಗೆ ಬರಬೇಕು. ಹೀಗೆ ಮಾಡುವಾಗ ಸಾಯಬೇಕಾದರೆ, ಸಾಯುವೆವು. ಸಾವಿಗೆ ನಾವು ಅಂಜುವುದಿಲ್ಲ.

ಇದು ನೈಜ ಅಹಿಂಸೆ. ಹೆದರಿ ಮನೆಯೊಳಗೆ ಹೋಗಿ ಕುಳಿತು ಹೋರಾಟಮಾಡಲು ಹೋಗದಿರುವುದು ಅಹಿಂಸೆಯ ಅರ್ಥಅಲ್ಲ. ಇದಕ್ಕೆ ಬದಲಾಗಿ ಹೋರಾಟದಲ್ಲಿ ಭಾಗಿಯಾಗಿ ನಾನು ಸಾಯಲು ಸಿದ್ಧ, ಆದರೆ ನಾನು ಯಾರನ್ನೂ ಹೊಡೆಯುವುದಿಲ್ಲ ಎಂದು ಹೇಳಬೇಕು. ಇದು ಅಹಿಂಸಯ ಶಕ್ತಿ. ಇದೇಆ ನಿಜವಾದ ಶಕ್ತಿ. ಅಹಿಂಸಯ ಈ ಶಕ್ತಿಯಿಂದ ಒಬ್ಬ ಚಿಕ್ಕ ಹುಡುಗ ಕೂಡ ದೊಡ್ಡ ರಾಕ್ಷಸನನ್ನು ಎದುರಿಸಬಲ್ಲ. ಗಾಂಧೀಜಿ ನಮಗೆ ಈ ಯುಕ್ತಿಕಲಿಸಿದರು. ಇದರೊಂದಿಗೆ ದೊಡ್ಡ ಸಮಸ್ಯೆಗಳನ್ನು ಕೂಡ ಬಗೆಹರಿಸಬಹುದೆಂದು ಹೇಳಿಕೊಟ್ಟರು. ರಾಜನೀತಿ ಕ್ಷೇತ್ರದಲ್ಲಿ ಅಹಿಂಸೆಯ ಪ್ರಯೋಗಮಾಡಿ ತೋರಿಸಿದರು.

ಆದರೆ ಜನರ ಮನಸ್ಸಿನಲ್ಲಿ ಈಗಲೂ ಕೂಡ ನಮಗೆ ದೊರೆತ ಸ್ವರಾಜ್ಯ ಕೇವಲ ಅಹಿಂಸ ಶಕ್ತಿಯಿಂದ ದೊರೆತಿಲ್ಲ ಎಂಬ ಸಂಶಯ ಉಳಿದಿದೆ.

ನಿಸ್ಸಂದೇಹವಾಗಿ ಇದು ನಿಜ. ಸ್ವರಾಜ್ಯ ದೊರೆಯುವುದರಲ್ಲಿ ಜಾಗತಿಕ ಪರಿಸ್ಥಿತಿಯ ಕೈವಾಡವೂ ಇದೆ. ನಿಜವಾದ ಸಂಗತಿ ಏನೆಂದರೆ ನಾವು ನಮ್ಮೊಳಗೆ ಎಷ್ಟೊಂದು ಪ್ರಮಾಣದಲ್ಲಿ ಅಹಿಂಸೆಯನ್ನು ಅನುಭವಿಸಬೇಕಾಗಿತ್ತೊ ಅಷ್ಟೊಂದು ಪ್ರಮಾಣದಲ್ಲಿ ಅನುಭವಿಸಲಿಲ್ಲ. ನಮ್ಮ ಅಹಿಂಸೆ ವಿಧಿ ಇಲ್ಲದೆ ಆಚರಿಸಿದ ಅಹಿಂಸೆಯಾಗಿತ್ತು. ದುರ್ಬಲರ ಅಹಿಂಸೆಯಾಗಿತ್ತು. ಗಾಂಧೀಜಿಯವರ ಮಾರ್ಗದರ್ಶನದಲ್ಲಿ ದೇಶದಲ್ಲಿ ಅಹಿಂಸಾತ್ಮಕ ಯುದ್ಧ ನಡೆಯಿತು. ಅದರಲ್ಲಿ ನಾವು ಅಹಿಂಸೆಯ ಅಂಕುಡೊಂಕಾದ ಆಚರಣೆಮಾಡಿದೆವು. ನಮ್ಮ ಮನಸ್ಸಿನಲ್ಲಿ ದ್ವೇಷ ಇಟ್ಟುಕೊಳ್ಳುತ್ತಲೆ ತೋರಿಕೆಗಾಗಿ ಅಹಿಂಸೆಯ ಆಚರಣೆಮಾಡುತ್ತಿದ್ದೆವು. ಅದರ ಪರಿಣಾಮವಾಗಿ ಸ್ವರಾಜ್ಯ ದೊರೆತ್ತಿದ್ದರೂ ಅದನ್ನು ನಾವು ಅಹಿಂಸೆಯಿಂದ ಪಡೆದೆವೆಂಬ ಭಾವನೆ ಬರಲಿಲ್ಲ. ಈ ಕಾರಣದಿಂದಾಗಿ ಅಹಿಂಸೆಯ ಇಡೀ ರುಚಿ ಕಳೆದುಹೋಯಿತು. ನಾವು ಅಹಿಂಸಾಶಕ್ತಿಯ ಕೆಲಚಮತ್ಕಾರಗಳನ್ನೇನೋ ನೋಡಿದರೂ ಕೂಡ ಆ ಶಕ್ತಿಯ ಪ್ರತಾಪದ ಅನುಭವ ನಮ್ಮೊಳಗೆ ಮಾಡಿಕೊಳ್ಳಲಾಗಲಿಲ್ಲ.

ಈ ಕಾರಣದಿಂದಲೇ ಹಿಂಸೆ-ಅಹಿಂಸೆಗೆ ಸಂಬಂಧಿಸಿದ ಪ್ರಶ್ನೆಯ ಅಂತಿಮ ನಿರ್ಣಯ ಬಹಳ ಜನರ ಮನಸ್ಸಿನಲ್ಲಿ ಇದುವರೆಗು ಆಗಲು ಸಾಧ್ಯವಾಗಿಲ್ಲ. ಹೆಚ್ಚು ಕಡಿಮೆ ಹಿಂಸೆಯನ್ನು ಮಾಡಲೇಬೇಕಾಗುತ್ತದೆ ಎಂಬ ತಿಳುವಳಿಕೆಯಿಂದಲೇ ಸಾಮಾನ್ಯಜನರು ನಡೆಯುತ್ತಾರೆ. ಹಳೆಯ ಕಾಲದಲ್ಲಿ ಒಳ್ಳೆಯ-ಒಳ್ಳೆಯ ಜನರೂ ಕೂಡ ಹಿಗೆಯೇ ತಿಳಿಯುತ್ತಿದ್ದರು. ಆದರೆ ಗಾಂಧೀಜಿಯವರ ಆಗಮನ ಮತ್ತು ನಿರ್ಗಮನದ ನಂತರವೂ ಕೂಡ ನಾವು ಈ ವಿಷಯದಲ್ಲಿ ನಮ್ಮ ಮನಸ್ಸಿನೊಂದಿಗೆ ಒಪ್ಪಂದಮಾಡಿಕೊಂಡಿದ್ದೇವೆ. ಮೊದಲು ಧರ್ಮಗಳೂ ಕೂಡ ಹೀಗೆಯೇಮಾಡಿದ್ದವು. ಅಹಿಂಸೆ ನಿಶ್ಚಯವಾಗಿಯು ಒಳ್ಳೆಯ ವಿಷಯವೇನೊ ಹೌದು ಅದು ವ್ಯಕ್ತಿಗತ ಜೀವನಕ್ಕಾಗಿ ಇದೆ; ಸಮಾಜದಲ್ಲಿ ಹಿಂಸೆಯೊಂದಿಗೆ ಸ್ವಲ್ಪ ಒಪ್ಪಂದಮಾಡಿಕೊಳ್ಳಲೇಬೇಕಾಗುತ್ತದೆ

ಎಂದು ಭಾವಿಸಲಾಗಿತ್ತು. ಒಂದು ವೇಳೆ ಹೀಗೆಮಾಡದಿದ್ದರೆ ಭಾನುವಾರದಂದು ಇಡೀ ದಿನ ಶ್ರದ್ಧೆಯಿಂದ ಬೈಬಲ್ ಓದಿದ ನಂತರ ಉಳಿದ ಆರೂದಿನ ಹೊಸ-ಶಸ್ತ್ರಾಸ್ತ್ರ ತಯಾರಿಸಿ ರಾಶಿಹಾಕುವ ಮಾತು ಏಕೆ ನಡೆಯುತ್ತದೆ? ಇದಕ್ಕೆ ಮುಖ್ಯಕಾರಣವೇನೆಂದರೆ ಈಗಲೂ ಸಮಾಜದಲ್ಲಿ ನೈತಿಕ ಸಾಧನಗಳ ಪ್ರತಿಷ್ಠೆ ಎಷ್ಟೊಂದು ಇರಬೇಕಾಗಿತ್ತೊ ಅಷ್ಟೊಂದು ಇಲ್ಲದಿರುವುದು.

ಆದ್ದರಿಂದ ನಾನು ಆಗಾಗ ಹೇಳುವುದೇನೆಂದರೆ ನಾವು ಗಾಂಧೀಜಿಯವರ ಅನುಯಾಯಿಗಳೆಂದು ತಿಳಿದಿದ್ದರೂ ನಿಜವಾಗಿ ನಮ್ಮಲ್ಲಿಯ ಅನೇಕ ಜನರು ತಿಲಕ್ ಮಹಾರಾಜರ ಅನುಯಾಯಿಗಲೇ ಆಗಿದ್ದೇವೆ. ಲೋಕಮಾನ್ಯರು ತಮ್ಮ "ಗೀತಾ ರಹಸ್ಯದಲ್ಲಿ ಅಹಿಂಸೆಯ ಬಹಳಷ್ಟು ಗೌರವ ಮಾಡಿದ್ದರೂ ಕೂಡ ಕೊನೆಯಲ್ಲಿ ಅವರು ಅಹಿಂಸೆಯ ಸ್ಥಾನ ವ್ಯಕ್ತಿಗತ ಜೀವನದಲ್ಲಿದೆ; ಸಾರ್ವಜನಿಕ ಜೀವನದಲ್ಲಿ ಅಹಿಂಸೆ ನಡೆಯುವುದಿಲ್ಲ" ಎಂದು ಹೇಳಿದ್ದಾರೆ. ವ್ಯವಹಾರದಲ್ಲಿ ಬಹು ಜನರು ಲೋಕಮಾನ್ಯರ ಈ ಅಭಿಪ್ರಾಯವನ್ನೆ ಅನುಸರಿಸುತ್ತಾರೆ. ಸಾಮಾಜಿಕ ಜೀವನದಲ್ಲಿ ಅಹಿಂಸೆಯ ಆಚರಣೆಯ ಪ್ರಶ್ನೆ ಬಂದಾಗಲೆಲ್ಲ ಹಿಂಸೆ ಅಹಿಂಸೆಯ ಬಗ್ಗೆ ಒಪ್ಪಂದಮಾಡಿಕೊಳ್ಳುತ್ತಾರೆ.

ನಿಜ ಹೇಳಬೇಕೆಂದರೆ ನಮಗೆ ಇನ್ನೂ ಅಹಿಂಸೆಯ ಶಕ್ತಿಯ ಪೂರಪೂರಅನುಭವವಾಗಿಲ್ಲ. ಹಿಂಸೆ-ಅಹಿಂಸೆಯ ವಿಷಯದ ಬಗ್ಗೆ ನಮ್ಮ ಮನಗಳಲ್ಲಿ ಯಾವುದೇ ಸ್ಪಷ್ಟತೆ ಇಲ್ಲ. ಈ ಕಾರಣದಿಂದಲೇ ಇಷ್ಟು ವರ್ಷಗಳ ನಂತರವೂ ಕೂಡ ದೇಶದಲ್ಲಿ ಹಿಂಸೆ ಬಹಳಷ್ಟಾಗಿದೆ. ಜನರ ಮನಸ್ಸಿನಲ್ಲಿ ಇನ್ನೂ ಕೂಡ ಹಿಂಸೆ ಇದೆ. ಗಾಳಿಯಲ್ಲಿ ಹಿಂಸೆ ಹಬ್ಬಿದೆ. ಮನಗಳಲ್ಲಿ ಈ ತಪ್ಪುವಿಚಾರ ಬೇರೂರಿ ಕುಳಿತಿದೆ. ಹಿಂಸೆಯಿಂದ ಸ್ವಲ್ಪ ಕೆಲಸವೇನೋ ಆಗುತ್ತದೆ. ಆದರೆ ಅದು ಸಂಪೂರ್ಣವಾಗಿ ಕೆಲಸಕ್ಕೆ ಬಾರದ್ದಾಗಿರುತ್ತದೆ. ಕೆಲಸವಾದ ನಂತರವೂ ಕೂಡ ಒಟ್ಟಾರೆ ನಷ್ಟವೇ ಆಗಿರುತ್ತದೆ. ಈ ಮಾತನ್ನು ತಿಳಿಯುವುದು ಇನ್ನೂ ಬಾಕಿಇದೆ.

ಬಹಳಷ್ಟು ಜನರು ಗಾಂಧೀಜಿ ಮತ್ತು ಸುಭಾಷರ ಎರಡು ಮಾರ್ಗಗಳಿವೆಯೆಂದು ತಿಳಿಯುತ್ತಾರೆ. ದೇಶಕ್ಕೆ ಇಬ್ಬರ ಮಾರ್ಗಗಳೂ ಅಗತ್ಯ. ಅವರಿಬ್ಬರ ಮಾರ್ಗಗಳು ಒಟ್ಟಿಗೆ ಸೇರಿದಾಗಲೇ ಕೆಲಸವಾಗುವುದೆಂಬ ಭ್ರಮೆ ಇಂದೂ ಕೂಡ ಇದೆ.

ಇಂದು ವಿಜ್ಞಾನ ಮನುಷ್ಯನ ಮುಂದೆ ಈ ಮೊದಲು ಇರದಂಥ ಸಮಸ್ಯೆಯನ್ನು ತಂದು ನಿಲ್ಲಿಸಿದೆ. ಮೊದಲಿದ್ದ ಹಿಂಸೆಯ ಸಾಧನಗಳಿಂದ ಕೆಲ ಪ್ರಶ್ನೆಗಳು ಬಗೆಹರಿಯುತ್ತಿದ್ದವು. ಆದ್ದರಿಂದ ಹಿಂಸೆ ಬೆಳೆಯುತ್ತಿತ್ತು. ಆದರೆ ಈಗ ಪರಮಾಣುವಿನಿಂದ ತಯಾರಾದ ಶಸ್ತ್ರಾಸ್ತ್ರಗಳು ಬಂದಿವೆ. ಆದ್ದರಿಂದ ಅಹಿಂಸಕ ಸಮಾಜದ ರಚನೆಯಾಗುವುದು ಇಲ್ಲವೇ ಮನುಷ್ಯಜಾತಿಯ ಅಂತವಾಗುವುದು.

ವಿಜ್ಞಾನವು ಮನುಷ್ಯನ ಎದುರಿಗೆ ಈ ಸಮಸ್ಯೆಯನ್ನು ನಿಲ್ಲಿಸಿದೆ. ನನ್ನ ಶ್ರದ್ಧೆ

ಏನೆಂದರೆ ಪರಮಾಣುವಿನಿಂದ ತಯಾರಾದ ಶಸ್ತ್ರಾಸ್ತ್ರಗಳು ಮನುಷ್ಯನನ್ನು ಅಹಿಂಸೆಯ ದಿಕ್ಕಿಗೆ ಕರೆದುಕೊಂಡು ಹೋಗುವವು. ಒಂದು ವೇಳೆ ಹೀಗೆ ಆಗದಿದ್ದರೆ ಮನುಷ್ಯಜಾತಿ ಅಳಿದು ಹೋಗುವುದು. ಈಶ್ವರನ ಇಚ್ಛೆ ಸಂಹಾರ ಇಲ್ಲದೇ ಇದ್ದರೆ ಅಹಿಂಸಕ ಸಮಾಜದ ರಚನೆ ಅನಿವಾರ್ಯ.

ಗಾಂಧೀಜಿಯ ಮೃತ್ಯುವಿನ ನಂತರ ಜನರಲ್ ಮ್ಯಾಕ್ ಆರ್ಥರ್ ತಮ್ಮ ಒಂದು ಸಂದೇಶದಲ್ಲಿ ಹೀಗೆ ಹೇಳಿದ್ದರು: "ಒಂದಲ್ಲ ಒಂದು ದಿನ ಗಾಂಧೀಜಿಯವರ ಮಾತನ್ನು ಕೇಳಬೇಕಾಗುತ್ತದೆ. ಅದರ ಹೊರತು ಎರಡನೆಯ ದಾರಿ ಇಲ್ಲವೇ ಇಲ್ಲ". ಈ ಮಾತನ್ನು ಸೇನೆಯ ಒರ್ವ ದೊಡ್ಡ ಸೇನಾಪತಿ ಹೇಳಿದ್ದು. ಪರಮಾಣುವಿನಿಂದ ತಯಾರಾದ ಶಸ್ತ್ರಾಸ್ತ್ರಗಳ ಕಾರಣದಿಂದಾಗಿ ಒಂದು ವಿಶಿಷ್ಟ ಪರಿಸ್ಥಿತಿ ಉಂಟಾಗಿರುವುದರಿಂದ ಆ ಸೇನಾಪತಿ ಆ ಮಾತನ್ನು ಹೇಳಬೇಕಾಯಿತು.

ಹಿಂಸೆ ಎಂಬುದು ಗತಕಾಲದ ವಿಷಯ ಮತ್ತು ಗಾಂಧೀಜಿಯವರ ಅಹಿಂಸಾವಿಚಾರ ನಮ್ಮ ಯುಗಕ್ಕೆ ಪೂರ್ಣತಃ ಅನುಕೂಲ ವಿಷಯ ಎಂಬ ಸಂಗತಿ ನಮ್ಮ ತಿಳುವಳಿಕೆಗೆ ಬರಬೇಕು. ಈ ಕಾರಣದಿಂದಾಗಿ ಇನ್ನು ಮೇಲೆ ನಮ್ಮ ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆಗಳನ್ನು ಅಹಿಂಸೆಯ ಶಕ್ತಿಯಿಂದ ಬಗೆಹರಿಸಿ ತೋರಿಸಿದರೆ ಜಗತ್ತಿಗೆ ಒಂದು ಮಾರ್ಗ ದೊರೆಯುವುದು. ಹಿಂಸೆಯನ್ನು ಮಾಡಿ ದಣಿದಿರುವ ಜಗತ್ತು ಹಿಂಸೆಯನ್ನು ತ್ಯಜಿಸುವುದಕ್ಕೆ ಸಿದ್ಧವಾಗಿದೆಯೆಂದು ಅನಿಸುತ್ತದೆ. ಸಾಮಾಜಿಕ ಪ್ರಶ್ನೆಗಳನ್ನು ಅಹಿಂಸೆಯ ಮೂಲಕ ಬಗೆಹರಿಸಬಹುದೆಂಬುದನ್ನು ಜಗತ್ತಿಗೆ ನಾವು ಮನವರಿಕೆಮಾಡಿಕೊಡಬೇಕಿದೆ.

ಗಾಂಧೀಜಿ ಕೇವಲ ಒರ್ವ ವ್ಯಕ್ತಿಯಾಗಿರಲಿಲ್ಲ. ಅವರು ಅಹಿಂಸಾ ತತ್ವದ ಪ್ರತೀಕವಾಗಿದ್ದರು. ಅವರ ಮೂಲಕ ಮನುಷ್ಯ ಜಾತಿಗೆ ಅಹಿಂಸಕ ಸಮಾಜ ರಚನೆಯ ಒಂದು ಸ್ಥೂಲ ರೂಪರೇಖೆ ಪ್ರಾಪ್ತವಾಗಿದೆ. ಇಂದಿನ ಜಗತ್ತಿನಲ್ಲಿ ಸರ್ವೋದಯದ ಕೂಗು ನ್ಯಾಯದ ಸ್ಥಾಪನೆಯ ಕೂಗಾಗಿದೆ. ಅನ್ಯಾಯ ಮತ್ತು ಶೋಷಣೆಯ ಸಮಾಪ್ತಗೊಳಿಸುವ ಆಹ್ವಾನದ ಕೂಗಾಗಿದೆ. ಇಂದಿನ ಯುಗದ ವಿಭಜನೆಯ ಶಕ್ತಿಯಿಂದ ಮುಕ್ತಿಹೊಂದುವ ಉಪಾಯವನ್ನು ಸರ್ವೋದಯ ವಿಚಾರ ನಮಗೆ ತೋರಿಸಿದೆ. ಇಂದಿನ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕಾಗಿ ಸಮಾಜದಲ್ಲಿ ಒಂದು ಕ್ರಾಂತಿಕಾರಿ ಚೈತನ್ಯವನ್ನು ಹೊರಹೊಮ್ಮಿಸಲು ಅದು ಬಯಸುತ್ತದೆ. ನ್ಯಾಯ ಮತ್ತು ಸಹೋದರತ್ವದ ವಾತಾವರಣ ಉಂಟಾಗುವ ಮತ್ತು ಹಳ್ಳಿಹಳ್ಳಿಗಳಲ್ಲಿ ಅಧಿಕಾರ ಮತ್ತು ಸಂಪತ್ತಿನ ಜೂಜಾಟ ಮುಕ್ತಾಯವಾಗುವಂಥ ಶಕ್ತಿ ಉಂಟಾಗುವ ವಿಕೇಂದ್ರೀಕರಣ ಮತ್ತು ಗ್ರಾಮ ಸ್ವರಾಜ್ಯದ ವಿಚಾರ ಮೂಡುವಂಥ ಚೈತನ್ಯವದು. ಮನುಷ್ಯ ಜಾತಿಗೆ ಗಾಂಧೀಜಿ ಕೊಟ್ಟ ಅಮೂಲ್ಯಕಾಣಿಕೆಯಾಗಿದೆ ಇದು.

ಆರ್ಥಿಕಾಭಿವೃದ್ಧಿ: ಬೇರೊಂದು ದೃಷ್ಟಿಕೋನ

ಮೂಲ – ಭರತ್ ಡೋಗ್ರ   ಅನು – ಸುರೇಂದ್ರ ಕೌಲಗಿ

"ನಿಮಗೆ ಸಂದಿಗ್ಧತೆ ಉಂಟಾದಾಗ ಅಥವಾ ಆತ್ಮಾಭಿಮಾನ ಹೆಚ್ಚಾದಾಗ ಕೆಳಗಿನ ಪರೀಕ್ಷೆಗೆ ಒಳಪಡಿಸಿಕೊಳ್ಳಿ:ನೀವು ನೋಡಿದ ಕಡುಬಡವ ಹಾಗೂ ಅತ್ಯಂತ ದುರ್ಬಲ ಮನುಷ್ಯನ ಮುಖವನ್ನು ಜ್ಞಾಪಿಸಿಕೊಳ್ಳಿ. ನೀವು ಕೈಗೊಳ್ಳಬೇಕೆಂದಿರುವ ಕೆಲಸ ಆ ಮನುಷ್ಯನ ಉಪಯೋಗಕ್ಕೆ ಬರುವುದೆ ಎಂದಾಲೋಚಿಸಿ" –ಮಹಾತ್ಮಾಗಾಂಧಿ.

ಅಭಿವೃದ್ಧಿ ಹೊಂದದೇ ಇರುವ ದೇಶಗಳ ಆರ್ಥಿಕ ಬೆಳವಣಿಗೆಗಾಗಿ ಮುಂದುವರಿದ ದೇಶಗಳಲ್ಲಿಯ ಪ್ರಸ್ತುತ ರೀತಿನೀತಿಗಳನ್ನು ಯಥಾವತ್ತಾಗಿ ಅನುಕರಿಸುವುದೊಂದೆ ಇರುವ ಮಾರ್ಗ ಎಂದು ತಿಳಿಯುವುದು ಅವಿಚಾರ. ಅಲ್ಲದೆ ಪಾಶ್ಚಿಮಾತ್ಯರ ಅಮಾನುಷ ವಿಕಲತೆಗಳ ಬಗೆಗಿನ ಅಜ್ಞಾನವು ಹೌದು – ಇ.ಎಫ್.ಶುಮಾಕರ್.

ಆದರ್ಶದ ದೃಷ್ಟಿಯಿಂದ ಯೋಚನೆ ಮಾಡಿದಲ್ಲಿ ಯಾವುದೇ ಒಂದು ಅರ್ಥಶಾಸ್ತ್ರ ಕೆಳಗೆ ಕಾಣಿಸಿದವುಗಳನ್ನು ಸಾಧಿಸಲು ಪ್ರಯತ್ನಿಸಬೇಕು.

೧) ಜನರ ಎಲ್ಲ ಮೂಲಭೂತ ಅಗತ್ಯಗಳನ್ನು ಪೂರೈಸಬೇಕು.

೨) ಎಲ್ಲ ಯುವಜನರು ತಮಗೆ ಆಸಕ್ತಿದಾಯಕವೆನಿಸಿರುವ ಉದ್ಯೋಗಗಳಲ್ಲಿ ಮತ್ತು ಚಟುವಟಿಕೆಗಳಲ್ಲಿ ತೊಡಗಿ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳುವಂತಾಗಬೇಕು.

ಈ ಉದ್ದೇಶಗಳನ್ನು ನೆರವೇರಿಸಿಕೊಳ್ಳುವ ಪ್ರಯತ್ನದಲ್ಲಿ ಇತರೆ ಅರ್ಥವ್ಯವಸ್ಥೆಯನ್ನಾಗಲಿ, ದೇಶವನ್ನಾಗಲಿ ಸುಲಿಗೆಮಾಡಕೂಡದೆಂಬುದನ್ನು ಇಲ್ಲಿ ಒತ್ತಿಹೇಳಬೇಕಿದೆ.

ಆದ್ದರಿಂದಲೇ ಮೂಲಭೂತ ಅಗತ್ಯಗಳೊಂದಿಗೆ ಕೆಲವು ಆರಾಮುಗಳನ್ನು ಪಡೆಯುವ ಉದ್ದೇಶವನ್ನೂ ನಾವು ಒತ್ತಿಹೇಳುತ್ತಿದ್ದೇವೆ.

ಎಲ್ಲ ಜನರಿಗೆ ಎಷ್ಟು ಸಾಧ್ಯವೋ ಅಷ್ಟು ಆರಾಮಗಳನ್ನು ಮತ್ತು ಐಶಾರಾಮಗಳನ್ನು ಕೊಡಬೇಕೆಂಬ ಮಾತನ್ನು ನಾವು ಎಂದೂ ಹೇಳುವುದಿಲ್ಲ. ಒಂದು ವೇಳೆ ಯಾವುದೇ ಒಂದು ಆರ್ಥಶಾಸ್ತ್ರ ಎಲ್ಲ ಜನರಿಗೂ ಸಾಧ್ಯವಾದಷ್ಟು ಐಶಾರಾಮಗಳನ್ನು ಕೊಡಬೇಕೆಂದು ಬಯಸಿದಲ್ಲಿ ಇದು ಬೇರೆ ದೇಶಗಳ ಆರ್ಥಿಕ ಸಂಪನ್ಮೂಲಗಳನ್ನು ಲೂಟಿಮಾಡಿಯೇ ಮಾಡಬೇಕಾಗುತ್ತದೆ. ಅರ್ಥವ್ಯವಸ್ಥೆಯ ಆಂತರಿಕ ಸಂಪನ್ಮೂಲಗಳನ್ನು ಭವಿಷ್ಯದ ತಲೆಮಾರುಗಳಿಗೆ ಸಿಗದಂತೆ ಮಾಡಬೇಕಾಗುತ್ತದೆ.

ಇಂಥ ಅರ್ಥವ್ಯವಸ್ಥೆಯನ್ನು ಸ್ಪಷ್ಟವಾಗಿ ವಿರೋಧಿಸಲೂ ಬೇಕು, ತಿರಸ್ಕರಿಸಲೂ ಬೇಕು.

ಆದ್ದರಿಂದ ಯಾವುದೇ ಒಂದು ಅರ್ಥಶಾಸ್ತ್ರ ತನ್ನ ಜನರ ಮೂಲಭೂತ ಸೌಕರ್ಯಗಳನ್ನು ಮತ್ತು ಕೆಲವೇ ಕೆಲವು ಆರಾಮಗಳನ್ನು ಪೂರೈಸಲು ಪ್ರಯತ್ನಿಸಬೇಕು

ಎಂಬ ಮಾತು ಸ್ಪಷ್ಟವಾಗುತ್ತದೆ.

ನಾವು ಅನಗತ್ಯವಾಗಿ ನಿಯಂತ್ರಿತಗೊಳ್ಳಲು ಬಯಸುವುದಿಲ್ಲ. ಆದ್ದರಿಂದಲೇ ಮೂಲಭೂತ ಅಗತ್ಯಗಳೊಂದಿಗೆ ಕೆಲ ಆರಾಮಗಳನ್ನೂ ಕೂಡ ಸೇರಿಸುತ್ತೇವೆ. ಆಟಿಗೆ ಸಾಮಾನುಗಳು ಮತ್ತು ಗೊಂಬೆಗಳು, ಜನ್ಮದಿನದ ಔತಣಗಳು, ಪಿಕನಿಕ್‌ಗಳು, ವಧುಗಳ ಪೋಷಾಕುಗಳು ಇತ್ಯಾದಿಗಳನ್ನು ನಮ್ಮ ಅರ್ಥಶಾಸ್ತ್ರದ ಕಕ್ಷೆಯಿಂದ ವಜಾಮಾಡಿಲ.

ಮಾರುಕಟ್ಟೆಯ ರೀತಿ–ನೀತಿಗಳಿಗೆ ಪಾತ್ರವಹಿಸಲು ಸಾಕಷ್ಟು ಅವಕಾಶಕೊಡಲಾಗಿದೆ. ಆದರೆ ಮಾರುಕಟ್ಟೆಯ ಆ ರೀತಿ–ನೀತಿಗಳನ್ನು ಬಲವಾದ ಜನತಾ ಆಂದೋಲನಗಳ ಮೂಲಕ ಹತೋಟಿಯಲ್ಲಿಡಲು ಪ್ರಯತ್ನಿಸಲಾಗುವುದು. ಈ ಆಂದೋಲನಗಳು ಪರಿಸರ ರಕ್ಷಣೆಗೆ ಸಂಬಂಧಿಸಿದ್ದಾಗಿಯೂ ಮತ್ತು ಬೇರೆ ಸಮಾಜಗಳ ಶೋಷಣೆಯನ್ನು ವಿರೋಧಿಸುವಂಥದ್ದಾಗಿಯೂ ಇರುವಂಥ ದೃಷ್ಟಿಕೋನ ಉಳ್ಳದಾಗಿರುತ್ತದೆ. ಅಲ್ಲದೆ ಗ್ರಾಹಕರ ಮತ್ತು ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವಂಥ ಶಕ್ತಿಶಾಲಿ ಆಂದೋಲನಗಳು ಕೂಡ ಇರಬೇಕು.

ಗ್ರಾಮೀಣ ಸಮುದಾಯಗಳಲ್ಲಿ ಮತ್ತು ಚಿಕ್ಕ ನಗರಗಳಲ್ಲಿರುವ ಜನರ ಮೂಲಭೂತ ಸೌಕರ್ಯಗಳನ್ನು ಸ್ವಾವಲಂಬನೆಯ ಆಧಾರದ ಮೇಲೆ ಪೂರೈಸಿಕೊಳ್ಳುವ ಪ್ರಯತ್ನ ಮಾಡಲಾಗುವುದು. ಆ ಪ್ರಯತ್ನ ಸಾವಯವ ಕೃಷಿ, ಗ್ರಾಮೋದ್ಯೋಗ, ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಹೊಂದಿರುತ್ತದೆ. ಇನ್ನು ಬೇಕಾದ ಪದಾರ್ಥಗಳನ್ನು ಹೊರಗಿನ ವಿಶಾಲ ಮಾರುಕಟ್ಟೆಯಿಂದ ಪಡೆದುಕೊಳ್ಳಬಹುದು. ದೊಡ್ಡ ಖಾಸಗಿ ಕಂಪನಿಗಳು ಕೂಡ ಪದಾರ್ಥಗಳ ಉತ್ಪಾದನೆಯಲ್ಲಿ ಮಹತ್ವದಪಾತ್ರವಹಿಸುವವು. ಆದರೆ ಯಾವುದೇ ಕಂಪನಿಯು ಪದಾರ್ಥಗಳ ಮೇಲೆ ಸ್ವಾಮಿತ್ವಹೊಂದಲು ಅವಕಾಶವಿರುವುದಿಲ್ಲ. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಸಮತೋಲನವನ್ನು ಕಾಪಾಡುವಲ್ಲಿ ಮುಖ್ಯಪಾತ್ರವಹಿಸುವವು. ಅಗತ್ಯವಾಗಿರುವ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಅನಗತ್ಯ ಪ್ರವೇಶವನ್ನು ತಡೆಯಲಾಗುವುದು.

ಕಾರ್ಪರೇಟ್ ಮತ್ತು ಸಾರ್ವಜನಿಕ ಕೈಗಾರಿಕೆಗಳು ತಮ್ಮ ವ್ಯವಹಾರಗಳಲ್ಲಿ ಪಾರದರ್ಶಕತೆ ಮತ್ತು ಬಹಿರಂಗ ಲೆಕ್ಕಾಚಾರಕ್ಕೆ ಒಳಪಡಬೇಕಾಗುತ್ತದೆ.

"ಮೂಲಭೂತ ಅಗತ್ಯಗಳು ಎಂಬ ಪದಗುಚ್ಛ ಬಹುವ್ಯಾಪಕವಾಗಿ ಉಪಯೋಗಿಸಲ್ಪಡುವ ಮಾತಾಗಿದೆ. ಅದೇ ಸಮಯಕ್ಕೆ ಅದು ಗ್ರಹಿಕೆಗೆ ನಿಲುಕದೆ ನುಣುಚಿಕೊಳ್ಳುವಂಥದ್ದಾಗಿದೆ".

ಎಲ್ಲರಿಗೂ "ಮೂಲಭೂತ ಅಗತ್ಯಗಳು" ಎಂಬುದು ಅತ್ಯಂತ ಒಪ್ಪುವ ಉದ್ದೇಶವೆಂಬುದನ್ನು ಎಲ್ಲರೂ ಒಪ್ಪುವಂತೆ ಕಾಣುತ್ತದೆ. ಆದರೆ ವ್ಯವಹಾರಿಕ ಹಂತಕ್ಕೆ ಬಂದರೆ ಬಹಳಷ್ಟು ಸಮಸ್ಯೆಗಳಿವೆ. ಯಾಕೆಂದರೆ ಮೂಲಭೂತ ಅಗತ್ಯಗಳೆಂದರೇನು ಎಂಬ ಬಗ್ಗೆ ಜನರು ಬಹಳ ವ್ಯಾಪಕವಾದ ಅಭಿಪ್ರಾಯಗಳನ್ನು ಹೊಂದಿದ್ದಾರೆ.

ಬಹಳಷ್ಟು ಜನರಲ್ಲಿ ಮೂಲಭೂತ ಅಗತ್ಯಗಳ ಬಗ್ಗೆ ಅತಿಶಯೋಕ್ತಿಯ ಅರ್ಥವಿದೆ. ಅಗತ್ಯಗಳನ್ನು ಉಬ್ಬಿಸಿ ಹೇಳುವ ರೂಢಿಯಿದೆ. ವಸ್ತುಗಳ ಮತ್ತು ಸೇವೆಗಳ ಬೇಡಿಕೆ ಎಷ್ಟೊಂದು ಇರುತ್ತದೆ ಎಂದರೆ ಅವುಗಳು ಇಲ್ಲದೆ ತಾವು ಬದುಕಲು ಸಾಧ್ಯವೇ ಇಲ್ಲ ಎಂದು ಭಾವಿಸುವಷ್ಟು ಇರುತ್ತದೆ. ಜನರ ಈ ಬೇಡಿಕೆಗಳನ್ನು ಲಕ್ಷಾವಧಿ ಸಂಖ್ಯೆಯಲ್ಲಿರುವ ಬಡವರು ಅವುಗಳನ್ನು ಬಹುದೊಡ್ಡ ಆರಾಮಗಳೆಂದು ಭಾವಿಸುತ್ತಾರೆ. ಆಧುನಿಕ ಮಾನವನ ತೃಪ್ತಿಜೀವನದ ಕಲ್ಪನೆ ಇಷ್ಟು ವಿಶಾಲವಾದ ಮತ್ತು ಸದಾ ಬೆಳೆಯುತ್ತಿರುವ ಪದಾರ್ಥ ಮತ್ತು ಸೇವೆಗಳನ್ನು ಏಕೆ ಹೊಂದಿರುತ್ತದೆ? ಇದಕ್ಕೆ ಕಾರಣ ಬಹುಶಃ ನಮ್ಮ ಜೀವನದಲ್ಲಿ ಯಾವುದೊ ಅಮೂಲ್ಯವಾದುದನ್ನು ಕಳೆದುಕೊಂಡಿದ್ದೇವೆ ಮತ್ತು ಈ ಕೊರತೆಯನ್ನು ತುಂಬಲು ಪದಾರ್ಥಗಳನ್ನು ಮತ್ತು ತರಾವರಿ ಉಪಕರಣಗಳನ್ನು ಖರೀದಿಸುತ್ತಿದ್ದೇವೆ ಎಂದೆನಿಸುತ್ತದೆ. ಜೀವನದಲ್ಲಿಯ ಸಾಮಾಜಿಕ ಮತ್ತು ಆಧ್ಯಾತ್ಮಿಕ ಖಾಲಿತನವನ್ನು ಪದಾರ್ಥಗಳಿಂದ ತುಂಬಲು ಪ್ರಯತ್ನಿಸುತ್ತಿದ್ದೇವೆ.

ಪ್ರತಿಯೊಬ್ಬರೂ ಬಹಳಷ್ಟು ಗಡಿಬಿಡಿಯಲ್ಲಿರುವುದು ಆಶ್ಚರ್ಯದ ಸಂಗತಿ. ಜೀವನದಲ್ಲಿ ಸುಧಾರಣೆ ತಂದುಕೊಳ್ಳಲು ಆಗದಷ್ಟು ಗಡಿಬಿಡಿಇದೆ. ಬಿಡುವಿಲ್ಲದ ಜೀವನ ನಡೆಸುವುದೇ ಒಂದು ಮಹತ್ವದ ವಿಷಯವೆಂದು ನಮ್ಮಲ್ಲಿ ಅನೇಕರು ತಮಗೆ ತಾವೇ ಮನವರಿಕೆಮಾಡಿಕೊಳ್ಳುತ್ತಾರೆ. ಇದನ್ನು ಸಮರ್ಥಿಸುವುದಕ್ಕಾಗಿ ಎಷ್ಟೊಂದು ಪದಾರ್ಥಗಳನ್ನು ಮತ್ತು ಸೇವೆಗಳನ್ನು ಪಡೆಯಲು ಸಾಧ್ಯವೊ ಅಷ್ಟನ್ನು ಪಡೆಯಲುಪ್ರಯತ್ನಿಸುತ್ತಾರೆ ಮತ್ತು ಅಂಥ ಗಡಿಬಿಡಿಯ ಜೀವನ ಪದ್ಧತಿಗೆ ಅದು ಅಗತ್ಯವೆಂದೂ ಭಾವಿಸುತ್ತಾರೆ.

ಅಗತ್ಯಗಳ ಹೆಚ್ಚಳಕ್ಕೆ ಬಲವಾದ ಶಕ್ತಿಯೊಂದು ಕಾರಣವಾಗುತ್ತಿದೆ. ಅದು ಸಮಯಾಸಮಯವಿಲ್ಲದೆ ಎಲ್ಲ ಕಡೆಯಿಂದ ಆಗುತ್ತಿರುವ ಜಾಹಿರಾತುಗಳ ದಾಳಿ ಉಪಯುಕ್ತ ಪದಾರ್ಥಗಳ ಬಗ್ಗೆ ಮಾಹಿತಿ ಕೊಡುವಷ್ಟರ ಮಟ್ಟಿಗೆ ಜಾಹಿರಾತುಗಳ ಪಾತ್ರವಿದೆ. ಆದರೆ ವರ್ತಮಾನದ ಜಾಹಿರಾತುಗಳು ಈ ಎಲ್ಲೆಯನ್ನು ದಾಟಿಹೋಗುತ್ತಿವೆ. ಮತ್ತು ಜನರು ತಮಗೆ ನಿಜವಾಗಿ ಅಗತ್ಯವಿಲ್ಲದ ಪದಾರ್ಥಗಳಿಗಾಗಿ ಆಸೆಪಡುವಂತೆ ಮಾಡುತ್ತವೆ. ಮನುಷ್ಯನ ಎಲ್ಲ ಬಗೆಯ ದೌರ್ಬಲ್ಯಗಳ ಉಪಯೋಗವನ್ನು ಜಾಹಿರಾತುದಾರರು ಮಾಡಿಕೊಳ್ಳುತ್ತಾರೆ ಮತ್ತು ಯೋಗ್ಯವಲ್ಲದ ಮತ್ತು ಅಪಾಯಕಾರಿಯಾದ ಪದಾರ್ಥಗಳನ್ನು ಮಾರಲು ಪ್ರಯತ್ನಿಸುತ್ತಾರೆ. ಮದ್ಯ, ಸಿಗರೇಟ್, ಕುರುಕಲು ತಿಂಡಿ ಮತ್ತು ನಿರರ್ಥಕ ಹಾಗೂ ಅಪಾಯಕಾರಿಯಾದ ಔಷಧಿಗಳನ್ನು, ಸೌಂದರ್ಯ ಪ್ರಸಾದನಗಳನ್ನು ಮತ್ತು ಕೀಟನಾಶಕಗಳನ್ನು ಜಾಹಿರಾತು ಮೂಲಕ ಪ್ರಚಾರಪಡಿಸುವಲ್ಲಿ ಪ್ರತಿವರ್ಷ ಕೋಟ್ಯಾವಧಿ ಡಾಲರ್‌ಗಳನ್ನು ಖರ್ಚುಮಾಡಲಾಗುತ್ತಿದೆ. ನಮ್ಮ ದೌರ್ಬಲ್ಯಗಳ ಕಾರಣದಿಂದಾಗಿ ಮತ್ತು ಜಾಹಿರಾತುಗಳ ಪ್ರಭಾವದಿಂದಾಗಿ ನಾವು ನಮಗೇ ಅರಿವಿಲ್ಲದಂತೆ ಪದಾರ್ಥಗಳಾಗಿ ಪರಿವರ್ತಿತರಾಗುತ್ತಿದ್ದೇವೆ, ನಮ್ಮ ಜೀವನವನ್ನು ಪದಾರ್ಥೀಕರಣಗೊಳಿಸಿಕೊಳ್ಳುತ್ತಿದ್ದೇವೆ. ತನ್ಮೂಲಕ ಸಾಮಾಜಿಕ ಮತ್ತು

ಆಧ್ಯಾತ್ಮಿಕ ಖಾಲಿತನವನ್ನು ಭೌತಿಕ ಪದಾರ್ಥಗಳಿಂದ ತುಂಬುತ್ತಿದ್ದೇವೆ. ಇದನ್ನು ಅರ್ಥಮಾಡಿಕೊಳ್ಳುವುದೇ ನಮ್ಮ ಜೀವನಪದ್ಧತಿಯನ್ನು ಮಾರ್ಪಡಿಸಿಕೊಳ್ಳುವತ್ತ ಮೊದಲ ಹೆಜ್ಜೆಯಾಗಿದೆ. ಪರಿಸರ ಉಳಿಸಿಕೊಳ್ಳಬೇಕೆಂಬ ಸಾಮಾಜಿಕ ಮತ್ತು ಎಲ್ಲಜನರ ಮೂಲಭೂತ ಅಗತ್ಯಗಳನ್ನು ಪೂರೈಸಬೇಕೆಂಬ ಧ್ಯೇಯಗಳು ಮಾರ್ಪಾಡಾದ ಜೀವನ ಪದ್ಧತಿಯ ರೀತಿಯಾಗಿರುತ್ತವೆ.

ಸರ್ಕಾರದ ನೀತಿಗಳಲ್ಲಿ ಮತ್ತು ಸಾರ್ವಜನಿಕ ಸೇವಾ ಸಂಸ್ಥೆಗಳಲ್ಲಿ ಸೂಕ್ತ ಮಾರ್ಪಾಡುಮಾಡುವುದರ ಮೂಲಕ ಖಾಸಗಿ ದುಂದುವೆಚ್ಚವನ್ನು ಕಡಿಮೆಮಾಡಬಹುದಾಗಿದೆ. ಆರೋಗ್ಯ ಮತ್ತು ಶಿಕ್ಷಣ ಬಹಳ ಉತ್ತಮ ಉದಾಹರಣೆಗಳು. ಒಳ್ಳೆಯ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಖಾಸಗಿ ವಾಹನಗಳ ಅಗತ್ಯವನ್ನು ಕಡಿಮೆಮಾಡಬಹುದು. ಸಾಮೂಹಿಕ ಉತ್ಸವಾಚರಣೆ ಮತ್ತು ಸಭೆಗಳು ಖಾಸಗಿಯಾಗಿ ನಡೆಯುವ ದುಬಾರಿ ಮನರಂಜನ ಕಾರ್ಯಕ್ರಮಗಳ ಅಗತ್ಯವನ್ನು ಕಡಿಮೆಮಾಡಬಹುದು.

ಹೀಗೆ ಖಾಸಗಿ ಜೀವನಪದ್ಧತಿ ಮತ್ತು ವೃದ್ಧಿಗೊಂಡ ಸಮುದಾಯಜೀವನ ಮತ್ತು ಸರ್ಕಾರದ ನೀತಿಯಲ್ಲಿ ಅಗತ್ಯವಾದ ಬದಲಾವಣೆ–ಈ ಮೂರರ ಒಗ್ಗೂಡುವಿಕೆ ಮೂಲಭೂತ ಅಗತ್ಯಗಳ ಬಗ್ಗೆ ಇರುವ ನಮ್ಮ ತಿಳುವಳಿಕೆಯನ್ನು ಸಾಕಷ್ಟು ಬದಲಾಯಿಸಬಹುದು. ಇಂದಿನ ಸಮಾಜ ವ್ಯವಸ್ಥೆ ಮತ್ತು ಪರಿಸರದ ಪರಿಸ್ಥಿತಿಗಳಿಂದಾಗಿ ಜನರ ಅನಗತ್ಯಬೇಡಿಕೆಗಳನ್ನು ಪೂರೈಸಲು ಕಷ್ಟವಾಗುತ್ತದೆ. ಹಾಗೆ ಪೂರೈಸಬೇಕೆಂದರೆ ಹೀಗಾಗಲೇ ಬಹುವಾಗಿ ಕೆಟ್ಟಿರುವ ಪರಿಸರಕ್ಕೆ ಇನ್ನೂ ಹೆಚ್ಚಿನಹಾನಿ ಮಾಡಬೇಕಾಗುತ್ತದೆ. ಆದ್ದರಿಂದ ಪರಿಸರವನ್ನು ಇನ್ನಷ್ಟು ಹಾಳುಮಾಡದೆ ಮುಂದಿನ ತಲೆಮಾರಿನವರ ಹಿತವನ್ನು ಬಯಸುವುದಾದರೆ ಮತ್ತು ಎಲ್ಲರ ಮೂಲಭೂತ ಅಗತ್ಯಗಳನ್ನು ಸುಸ್ಥಿರವಾಗಿ ಪೂರೈಸುವುದಾದರೆ ಮೂಲಭೂತ ಅಗತ್ಯಗಳ ಬಗ್ಗೆ ವಸ್ತುನಿಷ್ಠವಾದ ತಿಳುವಳಿಕೆ ಅಗತ್ಯ.

ಸಮಾನತೆ ಮತ್ತು ಸರಳತೆ ಇವೆರಡು ಗ್ರಹಿಕೆಗಳನ್ನು ಒಟ್ಟಾಗಿ ಪರಿಭಾವಿಸಿದಾಗ ಮಾತ್ರ ಅವು ನಿಜವಾದ ಮಹತ್ವಪಡೆಯುತ್ತವೆ. ಒಂದು ಇನ್ನೊಂದನ್ನು ಬಿಟ್ಟು ನಮ್ಮನ್ನು ದೂರಒಯ್ಯಲಾರವು. ಆದರೆ ಅವೆರಡು ಒಟ್ಟುಗೂಡಿದಲ್ಲಿ ಒಂದು ಹೊಸ, ಒಂದು ಉತ್ತಮ ಜಗತ್ತನ್ನು ಕಟ್ಟಲು ಬಹುವಾಗಿ ಸಹಾಯಮಾಡುತ್ತದೆ.

ಹೀಗೆ ಸಮಾನತೆ ಮತ್ತು ಸರಳತೆ ಸುಸ್ಥಿರ ಅಭಿವೃದ್ಧಿಯನ್ನು ಕಟ್ಟುವ ಎರಡು ಕಂಬಗಳಾಗಿವೆ. ಇದನ್ನು ಸಾಧಿಸುವುದಕ್ಕಾಗಿ ಬಲಾಢ್ಯ ಹಿತಾಸಕ್ತಿಗಳನ್ನು ಎದುರಿಸಬೇಕಾಗುತ್ತದೆ ಮತ್ತು ಬಹಳ ಆಳವಾಗಿ ಜಾಗತಿಕ ಹಂತದಲ್ಲಿ ಹಾಗೂ ಸ್ಥಾನೀಯ ಹಂತದಲ್ಲಿ ಬೇರು ಬಿಟ್ಟಿರುವ ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳನ್ನು ದಾಟಬೇಕಾಗುತ್ತದೆ. ವಿಚಾರಪೂರ್ಣವಾದ, ಬದ್ಧತೆಯುಳ್ಳ ಸತತವಾದ ಚಳುವಳಿಯ ಮೂಲಕ ಹೆಚ್ಚುಜನರಿಗೆ ಸಂತೋಷ ಮತ್ತು ಭದ್ರತೆಗಳು

ದೊರೆಯಬೇಕಾದರೆ ಸಮಾನತೆ ಮತ್ತು ಸರಳತೆ ಆಧಾರಿತ ಸುಸ್ಥಿರ ಅಭಿವೃದ್ಧಿಯೇ ನಮ್ಮ ಯುಗದ ಅತ್ಯಂತ ಅವಶ್ಯಕವಾದ ಸಂಗತಿಯೆಂದು ತಿಳಿಸಬಹುದು.

ಭೌತಿಕ ಪದಾರ್ಥಗಳ ಉತ್ಪಾದನೆ ಮತ್ತು ಸೇವೆಗಳು ಒಂದು ಹಂತದವರೆಗೆ ಒಪ್ಪುವಂಥ ಸಂಗತಿ. ಆ ಹಂತದ ಆಚೆಗೂ ಆ ಸಂಗತಿಯನ್ನು ಬೆನ್ನಟ್ಟುವುದನ್ನು ಸ್ವಪ್ರೇರಿತರಾಗಿ ಬಿಟ್ಟುಬಿಡಬೇಕು. ಈ ವಿಚಾರವು ಬೆಳವಣಿಗೆಯ ಹುಚ್ಚುಹಿಡಿದಂಥವರಿಗೆ ವಿಚಿತ್ರವೆನ್ನಿಸಬಹುದು. ಆದರೆ ಆಧ್ಯಾತ್ಮಿಕ ಪುರುಷರ ಮತ್ತು ಅಪಾರ ಅನುಯಾಯಿಗಳುಳ್ಳ ಸಾಮಾಜಿಕ ಸುಧಾರಕರ ಬೋಧನೆಗಳಲ್ಲಿ ಈ ವಿಚಾರ ಓತಪ್ರೋತವಾಗಿದೆ.

ಇತ್ತೀಚೆಗೆ ಉದ್ಭವವಾದ ಸಂಕುಚಿತ ಆರ್ಥಿಕ ಚಿಂತನೆಯ ಹಿಡಿತದಿಂದ ನಾವು ಬಿಡುಗಡೆಹೊಂದಿ ಮಾನವ ಇತಿಹಾಸದಲ್ಲಿ ಸಂಭವಿಸಿದ ದೊಡ್ಡ ಆಧ್ಯಾತ್ಮಿಕ ಮತ್ತು ಸಾಮಾಜಿಕ ಆಂದೋಲನಗಳಿಗೆ ಸಲ್ಲಬೇಕಾದ ಮಹತ್ವವನ್ನು ಸಲ್ಲಿಸಿದಲ್ಲಿ ಈ ಗ್ರಹಿಕೆಗೆ ಬೆಂಬಲಕೊಡುವ ಅನೇಕ ಮೂಲಗಳು ದೊರೆಯುತ್ತವೆ. ವಿವಿಧ ಸಂಸ್ಕೃತಿ ಮತ್ತು ಸಮಾಜಗಳಲ್ಲಿರುವ ಸಹಜಶಕ್ತಿಯನ್ನು ಪಡೆದು ದುರಾಸೆ ಮತ್ತು ಹಿಂಸಾರಹಿತ ಜಗತ್ತನ್ನು ನಿರ್ಮಿಸಬಹುದು. ಅಲ್ಲಿ ಎಲ್ಲ ಜನರ ಮೂಲಭೂತ ಅಗತ್ಯಗಳ ಪೂರೈಕೆಯಾಗುವುದು, ಅಲ್ಲಿ ಮಾನವೀಯ ಸಂಬಂಧಗಳು ಮೌಲ್ಯಯುತವಾಗಿರುವವು, ಅಲ್ಲಿ ಅನ್ಯ ಪ್ರಕಾರದ ಜೀವರಾಶಿಗಳ ಬಗ್ಗೆ ಗೌರವವಿರುವುದು ಮತ್ತು ಅಲ್ಲಿ ಇಂದಿನ ಮತ್ತು ಮುಂದಿನ ತಲೆಮಾರುಗಳಿಗಾಗಿ ಪ್ರಕೃತಿ ಸಹಜ ಪರಿಸರವನ್ನು ಉಳಿಸುವ ಪ್ರಯತ್ನವಿರುವುದು.

ಹೆಚ್ಚು ಹೆಚ್ಚಾಗಿ ಸಂಗ್ರಹಿಸಬೇಕು ಮತ್ತು ಉಪಯೋಗಿಸಬೇಕು ಎಂದು ಅಭಿವೃದ್ಧಿಯ ಬಗ್ಗೆ ಇರುವ ಘೋರ ತಪ್ಪು ಕಲ್ಪನೆಯಿಂದ ಅಭಿವೃದ್ಧಿ ಬಿಡುಗಡೆಗೊಳಿಸಬೇಕು. ಎಲ್ಲರ ಮೂಲಭೂತ ಅಗತ್ಯಗಳನ್ನು ಪೂರೈಸುವಷ್ಟರ ಮಟ್ಟಿಗೆ ಭೌತಿಕ ಪದಾರ್ಥಗಳ ಉತ್ಪಾದನೆ ನ್ಯಾಯೋಚಿತವಾಗಿದೆ ಮತ್ತು ಸಮಾಜದ ಹಿತಕ್ಕನುಗುಣವಾಗಿದೆ. ಆದರೆ ಇದನ್ನು ಮೀರಿ ಆಗುವ ಉತ್ಪಾದನೆ ಮತ್ತು ಬಳಕೆಯನ್ನು ಸಮರ್ಥಿಸಲಾಗದು. ಅದು ನಿರುಪಯುಕ್ತ ವಿನಾಶವೆ ಹೊರತು ಅಭಿವೃದ್ಧಿಯಲ್ಲ.

ಸಾಧ್ಯವಿದ್ದಷ್ಟು ಎಲ್ಲ ಪ್ರಕಾರದ ಆತಂಕಗಳನ್ನು ಮತ್ತು ನೋವುಗಳನ್ನು ಸಾಮೂಹಿಕವಾಗಿ ಕಡಿಮೆಮಾಡುವ ಪ್ರಯತ್ನವೇ ಅಭಿವೃದ್ಧಿ ಎಂಬುದಾಗಿ ಹೊಸ ರೀತಿಯಲ್ಲಿ ವ್ಯಾಖ್ಯೆಮಾಡಬೇಕು. ಸ್ವಲ್ಪ ಆತಂಕ ಮತ್ತು ನೋವು ಇದ್ದೇ ಇರುವವು. ಆದರೆ ಬಹಳಷ್ಟು ಆತಂಕ ಮತ್ತು ನೋವು ತಪ್ಪಿಸಬಹುದಾದ ಕಾರಣಗಳಿಂದಲೆ ಅಭಿವೃದ್ಧಿ ಆಗುತ್ತದೆ. ಆದ್ದರಿಂದ ಅಭಿವೃದ್ಧಿ ಎಂಬುದನ್ನು ಈ ಪ್ರಕಾರದ ಆತಂಕ ಮತ್ತು ನೋವುಗಳನ್ನು ತಪ್ಪಿಸುವ ಪ್ರಯತ್ನವೆಂದು ಭಾವಿಸಬೇಕು. ತನ್ಮೂಲಕ ಜೀವನದ ಎಲ್ಲ ಬಗೆಯ ಆತಂಕಗಳನ್ನು ಸಾಧ್ಯವಾದಷ್ಟು ಕಡಿಮೆಮಾಡಬಹುದು. ಇದು ಸುಸ್ಥಿರ ಅಭಿವೃದ್ಧಿಯ ಸಾರಾಂಶ.

ಸಾಭಾರ : ಜನತ

ನಮ್ಮ ತಪ್ಪಾದ ಕಾರ್ಯವೇ ಕೆಟ್ಟ ಪ್ರತಿಫಲಕ್ಕೆ ಕಾರಣ

– ಜವಹರಲಾಲ್ ನೆಹರು

(ಇಂದಿಗೆ ೬೭ ವರ್ಷಗಳ ಹಿಂದೆ ಅಂದರೆ ೧೯೪೮ರಲ್ಲಿ ಮಹಾತ್ಮ ಗಾಂಧೀಜಿಯವರ ಹತ್ಯೆಯಾದ ೬ವಾರಗಳ ನಂತರ ಗಾಂಧೀಜಿಯವರ ಆಶ್ರಮ ಸೇವಾಗ್ರಾಮದಲ್ಲಿ ಗಾಂಧೀಜಿಯವರ ವಿಚಾರದ ಅಂದಿನ ನಾಯಕರು ಮತ್ತು ರಚನಾತ್ಮಕ ಕಾರ್ಯಕರ್ತರು ಒಟ್ಟಿಗೆ ಸೇರಿ "ಗಾಂಧೀ ಹೋದರು : ನಮಗೀಗ ದಿಕ್ಕು ತೋರುವವರು ಯಾರು?" ಎಂಬ ವಿಷಯವನ್ನಿಟ್ಟುಕೊಂಡು ನಡೆದ ಐದು ದಿನದ ಆತ್ಮವಿಮರ್ಶಾ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ.ರಾಜೇಂದ್ರ ಪ್ರಸಾದ್ ವಹಿಸಿದ್ದರು. ಆ ವಿಚಾರ ಗೋಷ್ಠಿಯಲ್ಲಿ ಮಾರ್ಚ್ ೧೪ರ ಅಪರಾಹ್ನನಡೆದ ಬಹಿರಂಗ ಸಭೆಯಲ್ಲಿ ಪಂಡಿತ್ ಜನಹರಲಾಲ್ ನೆಹರು ಅವರು ಮಾಡಿದ ಐತಿಹಾಸಿಕ ಭಾಷಣವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ – ಸಂ)

ಸೋದರ ಸೋದರಿಯರೆ ನೀವೇನು ವಿಚಾರ ಮಾಡುತ್ತಿರುವಿರೋ ನನಗೆ ಗೊತ್ತಾಗುತ್ತಿಲ್ಲ. ಆದರೆ ಇಲ್ಲಿ ಅನೇಕ ಅಂಗತಿಗಳು ನನ್ನ ಮನಸ್ಸಿಗೆ ಬರುತ್ತಿವೆ. ಗಾಂಧಿ ಬದುಕಿದ ಈ ಜಾಗದಲ್ಲಿ ಇಷ್ಟೊಂದು ಭದ್ರತೆ, ಪೊಲೀಸರು ಯಾಕೆ? ನನಗೆ ಆತಂಕವಾಗುತ್ತಿದೆ. ನಮ್ಮಗಳ ಕ್ಷೇಮಕ್ಕಾಗಿ ಈ ಏರ್ಪಾಟಾಗಿದ್ದರೆ ಅದರಿಂದ ನನಗೆ ನಾಚಿಕೆಯಾಗುತ್ತಿದೆ. ನಾವು ಎಲ್ಲಿಗೆ ಹೋಗಬೇಕೆಂದು ಕೊಂಡಿದ್ದೆವೋ, ಈಗ ಎಲ್ಲಿಗೆ ಹೋಗುತ್ತಿರುವೆವೋ ಈ ನಡುವೆ ಎಂಥಾ ವ್ಯತ್ಯಾಸವಿದೆಯಲ್ಲಾ ಎಂದು ಯೋಚಿಸಲು ಆರಂಭಿಸಿದ್ದೇನೆ. ಒಂದು ಕಡೆ ನಾವು ಅಹಿಂಸೆಯ ಬಗ್ಗೆ ಮಾತಾಡುತ್ತಿದ್ದೇವೆ, ಇನ್ನೊಂದು ಕಡೆ ಹಗೆತನಕ್ಕೆ ಸಿದ್ಧರಾಗುತ್ತಿದ್ದೇವೆ. ಪ್ರತಿ ದಿನ ಈ ದ್ವಂದ್ವವನ್ನು ನಾವು ಎದುರಿಸುತ್ತಿದ್ದೇವೆ. ಬೆಳಗ್ಗೆಯಿಂದ ಮಧ್ಯರಾತ್ರಿಯತನಕ ಯಂತ್ರದಂತೆ ಕೆಲಸಮಾಡುತ್ತಿದ್ದೇವೆ. ಯೋಚಿಸುವುದಕ್ಕೂ ಬಿಡುವು ದೊರಕುತ್ತಿಲ್ಲ. ಯಾವ ಕಡೆ ನಾವು ಸಾಗುತ್ತಿದ್ದೇವೆ ಅನ್ನೋದರ ಬಗ್ಗೆ ನನಗಂತೂ ಸ್ಪಷ್ಟತೆ ಇಲ್ಲ. ನಾವು ನಿಜವಾಗಿಯೂ ನಮ್ಮ ಗುರಿಯೆಡೆಗೆ ಹೋಗುತ್ತಿದ್ದೇವೆಯೇ? ಅಥವಾ ಅದರಿಂದ ದೂರ ಸರಿಯುತ್ತಿದ್ದೇವೆಯೇ? ಯಾವ ಸಲಹೆಯನ್ನು ನಾನು ನಿಮಗೆ ನೀಡಬಲ್ಲೆ? ನಾನೀಗ ನಿಮ್ಮ ಮುಂದೆ ನನಗಿರುವ ಕೆಲವು ಕಾಳಜಿಗಳ ಬಗ್ಗೆ ಮಾತ್ರ ಮಾತಾಡಬಲ್ಲೆ.

ಈ ಸಂದರ್ಭದಲ್ಲೆ ಹೊರಗಿನ ಶಕ್ತಿಗಳು ನಮ್ಮ ಮೇಲೆ ಆಕ್ರಮಣ ಮಾಡುವ ಸಾಧ್ಯತೆಇಲ್ಲ. ನಮ್ಮ ಭಯ ಏನೆಂದರೆ ನಮ್ಮೊಳಗೇ ಇರುವ ಹಿಂಸೆ ಮತ್ತು ಆಂತರಿಕ ಬಿಕ್ಕಟ್ಟು. ಹಿಂದೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಿಂಸೆ, ಅಹಿಂಸೆಯ ಪ್ರಶ್ನೆ

ನಮ್ಮನ್ನು ಕಾಡುತ್ತಿತ್ತು. ಆಗ ನಾನು ಬಾಪುವಿನ ಬಳಿ ಓಡುತ್ತಿದ್ದೆ. ಸಾಕಷ್ಟು ಚರ್ಚೆ, ವಾದ ವಿವಾದದ ನಂತರ ಬ್ರಿಟಿಷರ ವಿರುದ್ಧ ಹಿಂಸೆಯನ್ನು ಪ್ರಯೋಗಿಸಿದರೆ ಅಂತಿಮವಾಗಿ ಒಳ್ಳೆಯ ಪ್ರತಿಫಲ ದೊರೆಯಲಾರದು ಎಂದು ನನ್ನ ಮನಸ್ಸು ಹೇಳುತ್ತಿತ್ತು. ಬ್ರಿಟಿಷರ ವಿರುದ್ಧ ಸ್ವಲ್ಪ ಮಟ್ಟಿನ ಹಿಂಸೆಯನ್ನು ನಾವು ಬಳಸಬಹುದಿತ್ತು. ಆದರೆ ಅದೇ ನಮ್ಮ ವಿರುದ್ಧ ತಿರುಗಿ ನಮ್ಮೊಳಗೆ ಅದರ ಬೇರೆ ಬೇರೆ ರೂಪುಗಳು ಮೂಡಿ ಅದು ಎಲ್ಲಿಗೆ ನಮ್ಮನ್ನು ಕೊಂಡೊಯ್ಯುತ್ತಿತ್ತೋ ಊಹಿಸುವುದು ಸುಲಭವಲ್ಲ. ಒಮ್ಮೆ ಈ ರೀತಿಯ ಹಿಂಸೆ ಪ್ರಾರಂಭವಾದರೆ ದೇಶ ಛಿದ್ರವಾಗಿ ಹೋಗುತ್ತದೆ. ಅದು ಸ್ವತಂತ್ರವಾಗಿ ಉಳಿಯಲಾರದು. ಒಮ್ಮೆ ಹಿಂಸೆಗೆ ಬಾಗಿಲು ತೆರೆದೆವೆಂದರೆ ಅದು ನಿಲ್ಲುವುದೇ ಇಲ್ಲ. ಆದ್ದರಿಂದ ಯಾವುದು ಮೊದಲು, ಯಾವುದು ಎರಡನೆಯದು, ಮೂರನೆಯದು ಎಂದು ತೀರ್ಮಾನಿಸಬೇಕು. ಮೊದಲನೆಯದನ್ನು ಮೊದಲು ಆದ್ಯತೆಯಲ್ಲೇ ಪರಿಗಣಿಸಬೇಕು.

ನಾವು ಯಾಕಿಷ್ಟು ದುರ್ಬಲರಾಗುತ್ತಿದ್ದೇವೆ? ಇದರ ಬಗ್ಗೆ ತಾವೆಲ್ಲ ಗಂಭೀರವಾಗಿ ಯೋಚಿಸಬೇಕು. ನಾವು ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನೋ, ಪಾಕೀಸ್ತಾನವನ್ನೋ ಟೀಕಿಸುವುದು ಸುಲಭ. ಆದರೆ ಇಲ್ಲಿ ಆಗುತ್ತಿರುವ ಅಹಿತಕರ ಬೆಳವಣಿಗೆಯಿಂದ ಹೇಗೆ ಪಾರಾಗೋದು. ಅಷ್ಟಕ್ಕೂ ನಮ್ಮನ್ನು ನಾವೇ ಹಳಿದುಕೊಳ್ಳಬೇಕು. ಸನ್ನಿವೇಶವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಹಿಂಸೆಯ ಲಕ್ಷಣಗಳನ್ನು ನಾವೆಲ್ಲ ನೋಡುತ್ತಾ ಇದ್ದೇವೆ. ಒಂದು ಇನ್ನೊಂದಕ್ಕೆ ಹೇಗೆ ದಾರಿಯಾಗುತ್ತಾ ಇದೆ ಎಂಬುದನ್ನೂ ನ್ಹೋಡುತ್ತಿದ್ದೇವೆ. ಒಬ್ಬ ಮಂತ್ರಿಯಾಗಿ ನಾನು ಇದನ್ನು ಇನ್ನೂ ಹೇಗೆ ನಿಭಾಯಿಸಬಹುದಿತ್ತು. ಈ ಹಿಂಸೆಯನ್ನು ತಡೆಯಲು ಪ್ರತಿದಾಳಿ ನಡೆಸುವುದು ನನ್ನ ಕರ್ತವ್ಯ. ನಾನು ಹೀಗೆ ಮಾಡದೇ ಹೋದರೆ ಅದು ನಿಲ್ಲುವುದೇ ಇಲ್ಲ.

ಈ ದೃಷ್ಟಿಯಿಂದ ವಿನೋಬಾಜಿ ಹೇಳಿದ್ದು ವಿಷಯಕ್ಕೆ ಹತ್ತಿರವಿದೆ. ಅವರು ಎತ್ತಿದ ಪ್ರಶ್ನೆ ನಿಜವಾಗಿಯೂ ಮೂಲಭೂತವಾದದ್ದು. ರಾಜಕೀಯ ರಂಗದಲ್ಲಿ ನಮ್ಮಲ್ಲಿ ಪ್ರತಿಯೊಬ್ಬರೂ ಅದ್ಭುತವಾದ ವಾದಗಳನ್ನು ಮಂಡಿಸುತ್ತೇವೆ. ಉದಾತ್ತ ವಿಚಾರಗಳ ಬಗ್ಗೆ ಮಾತಾಡುತ್ತೇವೆ. ಅವು ಅವಷ್ಟಕ್ಕೇ ಇದ್ದರೆ ಅಪಾಯವೇನೂ ಇಲ್ಲ. ನಾವು ಅಳವಡಿಸಿಕೊಂಡಿರುವ ದಾರಿಯ ಬಗ್ಗೆ ಮುಂಚಿತವಾಗಿ ಯಾರೂ ಯೋಚಿಸುವುದಿಲ್ಲ, ಘಟನೆ ನಡೆದ ನಂತರವೇ ನಮಗೆ ನಮ್ಮ ಹಾದಿ ಸರಿಯಾದ್ದೋ ತಪ್ಪಾದದ್ದೋ ಎಂಬುದು ತಿಳಿಯುತ್ತದೆ. ಅವುಗಳ ಗುಣಾವಗುಣಗಳನ್ನು ಅವು ಯವ ಪ್ರತಿಫಲದತ್ತ ಕರೆದೊಯ್ಯುತ್ತವೆ ಎಂಬುದರ ಮೇಲೆ ಗೆಲುವೋ ಸೋಲೋ ಎಂದು ತೀರ್ಮಾನಿಸುತ್ತೇವೆ. ಎಲ್ಲ ಮುಗಿದ ಮೇಲೆ ಇದನ್ನು ಕಂಡುಕೊಂಡರೆ ಆಗುವ ಲಾಭವಾದರೂ ಏನು?

ಅತ್ಯಂತ ಪ್ರಾಚೀನ ವಾದವೊಂದಿದೆ: "ಮುಟ್ಟಬೇಕಾದ ಗಮನ ಒಳ್ಳೆಯದಿದ್ದರೆ ಅದನ್ನು ಮುಟ್ಟಲು ಅನುಸರಿಸುವ ದಾರಿ ಒಳ್ಳೆಯದೋ ಕೆಟ್ಟದ್ದೋ ಎಂಬುದನ್ನು ಅದೇ ತೀರ್ಮಾನಿಸುತ್ತದೆ". ಇದು ಬಹು ಹಿಂದಿನ ಕಾಲದಿಂದಲೂ ಚರ್ಚಿತವಾಗುತ್ತಿರುವ ವಿಚಾರ. ಯಾಕೆಂದರೆ ಇದು ತೀರಾ ಸಂಕೀರ್ಣವಾದ ಪ್ರಶ್ನೆ. ಇಂಥದಕ್ಕೆ ಸರಳವಾಗಿ ಹೌದು ಅಥವಾ ಅಲ್ಲ ಎಂದು ಹೇಳಲು ಬರುವುದಿಲ್ಲ. ಕಳವಳ ಹಾಗೂ ಆತ್ಮನಿರೀಕ್ಷಣೆಯ ನಂತರ ನಾನು ಒಂದು ನಿರ್ಧಾರಕ್ಕೆ ಬಂದು ನಮ್ಮ ತಪ್ಪಾದ ಕಾರ್ಯವೇ ಕೆಟ್ಟ ಪ್ರತಿಫಲಕ್ಕೆ ಕಾರಣ ಎಂದು ತಿಳಿದೆ. ಇದು ಅತ್ಯಂತ ಕ್ಷುದ್ರವಾದದ್ದು. ಆದರೆ ಅದರ ಪರಿಣಾಮ ತುಂಬಾ ಆಳವಾದದ್ದು. ರಾಜಕೀಯದಲ್ಲಿ ಆಕ್ಷಣದ ಲಾಭವನ್ನಷ್ಟೇ ಲೆಕ್ಕ ಹಾಕುತ್ತೇವೆ. ಆದರೆ ನಿಜವಾಗಿಯೂ ಆಗಬೇಕಾದುದೇನೆಂದರೆ ಲಾಭವಾಗುವುದೋ ಇಲ್ಲವೋ ಅದು ತನಗೆ ತಾನೇ ಸರಿಯಾಗಿರುವ ಒಂದು ನಿರ್ದಿಷ್ಟ ಕ್ರಿಯೆ. ನಮ್ಮ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಇದೇ ಮೂಲಭೂತ ತತ್ವ. ಇದರ ಬಗ್ಗೆ ನಮಗೆ ಸ್ಪಷ್ಟತೆ ಇತ್ತು ಎಂದರೆ ಎಲ್ಲ ಸಮಸ್ಯೆಗಳನ್ನು ನಾವು ಬಗೆಹರಿಸಿಕೊಳ್ಳಬಲ್ಲೆವು.

ಇಂದಿನ ಪ್ರಪಂಚದ ಸ್ಥಿತಿಯನ್ನು ಗಮನಿಸಿ. ನಮ್ಮ ಕಣ್ಣೆದುರೇ ಎರಡು ಯುದ್ಧಗಳು ನಡೆದು ಹೋದವು. ಮೂರನೆಯದ್ದರ ಸಾಧ್ಯತೆಯೂ ಇರಬಹುದು. ಈ ಎಲ್ಲದರಿಂದ ದೂರ ಇರಬೇಕೆಂದು ಬಯಸೋಣ. ಆದರೂ ನಾವು ಹಾಗೆ ಮಾಡಲಾಗುವುದಿಲ್ಲ. ಹೇಗೋ ನಾವು ದೂರವಿರುತ್ತೇವೆಂದು ಕೊಂಡರೂ ಪ್ರಪಂಚವನ್ನೇ ನುಂಗುವ ಬೆಂಕಿಯ ಜ್ವಾಲೆಗಳಿಂದ ತಪ್ಪಿಸಿಕೊಳ್ಳಲಾರೆವು. ಸರ್ಕಾರದ ಒಬ್ಬ ಸದಸ್ಯನಾಗಿ ನಾನು ನಿಶ್ಕ್ರಿಯವಾಗಿ ಹೇಗೆ ಕುಳಿತುಕೊಳ್ಳಲಿ. ನನ್ನ ದೇಶದ ಭದ್ರತೆಯನ್ನು ಕಾಪಾಡಿಕೊಳ್ಳಲು ಯಾವ ಯಾವ ಕ್ರಮಗಳು ಮುಖ್ಯವೋ ಅವನ್ನೆಲ್ಲ ನಾನು ಮಾಡಲೇಬೇಕು. ಈ ಸಮಸ್ಯೆ ನಮ್ಮೆದುರು ಇದೆ. ನಮ್ಮ ಉದ್ದೇಶಗಳು ಒಳ್ಳೆಯವೇ ಇವೆ. ಆದರೆ ನಾವು ಅಳವಡಿಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳುವುದು ಅಷ್ಟು ಸುಲಭವಿಲ್ಲ. ಒಂದು ಆಶಯ ಒಳ್ಳೆಯದೇ ಇದ್ದು ಆ ಸಂಗತಿಯ ಇತರೆ ಮುಖಗಳನ್ನು ದೀರ್ಘಕಾಲದಿಂದ ಉಪೇಕ್ಷಿಸುತ್ತಾ ಇದ್ದರೆ ಅದೇ ಮತ್ತೆ ಆ ಹಳೆಯ ಕತೆ ಇದೆಯಲ್ಲ ಅದು ಇದ್ದೇ ಇರುತ್ತದೆ.

ನಾವು ಜನರ ಮೇಲಿರುವ ಹೊರೆಯನ್ನೂ ಗಮನಿಸಬೇಕು. ಅದೇನೆಂದರೆ ಅವರು ಇದುವರೆಗೂ ತಾಳಿಕೊಂಡು ಬಂದಿರುವ ಶೋಷಣೆ. ನಮ್ಮಲ್ಲಿ ಅವಶ್ಯಕತೆ ಇಲ್ಲದ ವಸ್ತುಗಳನ್ನು ಉಪಯೋಗಿಸಬಾರದು ಎಂದು ವಿನೋಬಾಜಿ ಸಲಹೆ ನೀಡಿದ್ದಾರೆ. ಮೂಲಭೂತವಾಗಿ ಮತ್ತು ತಾತ್ವಿಕವಾಗಿ ಅವರ ಈ ನಂಬಿಕೆ ಸರಿಯಾದದ್ದು. ನಿಜ ಯಾವುದು ಅವಶ್ಯ ಯಾವುದು ಅಲ್ಲ ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇಂಥಾ ಎಷ್ಟೋ ವಿಷಯಗಳು ನನಗಿಂತ ಅವರಿಗೆ ಇನ್ನೂ ಹೆಚ್ಚು ಗೊತ್ತಿವೆ. ವಿನೋಬಾ ಹೇಳಿದ್ದನ್ನು ನಾನು ಸಂಪೂರ್ಣ ಸಮ್ಮತಿಸುತ್ತೇನೆ. ಆದರೆ ಅವಶ್ಯಕ, ಅನವಶ್ಯಕ ಪ್ರಶ್ನೆ

ತುಂಬಾ ಜಟಿಲವಾದದ್ದು. ಈ ಬಗ್ಗೆ ತೃಪ್ತಿಕರವಾದ ತೀರ್ಮಾನಕ್ಕೆ ಬರುವುದು ಕಷ್ಟ. ನನ್ನದೇ ಅಭಿಪ್ರಾಯ ಕೊಡಲೂ ಕೂಡ ನನಗೆ ಯಾವ ಹಕ್ಕೂ ಇಲ್ಲ.

ಇಂಥಾ ಮೂಲಭೂತ ಸಮಸ್ಯೆಗಳ ಜೊತೆಗೇ ನಮ್ಮ ಅನುಭವಕ್ಕೇ ಸಿಕ್ಕಬಹುದಾದ ಕಣ್ಣೆದುರೇ ಕಾಣುವ ಸಮಸ್ಯೆಗಳಿವೆ. ಅವುಗಳಿಗೆ ನಾವು ಗಮನ ನೀಡದಿದ್ದರೆ ಉತ್ತರ ಭಾರತದ ಪರಿಸ್ಥಿತಿಯನ್ನು ಹತೋಟಿಗೆ ತರಲು ಸಾಧ್ಯವಾಗುವುದಿಲ್ಲ. ಡಾ?ಚೊಯಿತ್ರಮ್‌ಗಿ ಡ್ವಾನಿ ಅವರಿಂದ ಒಂದು ದೀರ್ಘವಾದ ಟೆಲಿಗ್ರಾಂ ನನಗೆ ಬಂದಿದೆ. ಅವರು ಹೇಳುತ್ತಾರೆ ನಿರಾಶ್ರಿತರ ಸಮಸ್ಯೆಯನ್ನು ಈ ಸಮಾವೇಶ ಪ್ರಧಾನವಾಗಿ ಪರಿಗಣಿಸಬೇಕು ಎಂದು. ಯಾಕೆಂದರೆ ಇದು ಎಲ್ಲಕ್ಕಿಂತ ಮುಖ್ಯವಾದ ಪ್ರಶ್ನೆ. ನಿರಾಶ್ರಿತರ ಸಮಸ್ಯೆ ಮತ್ತು ಗಾಂಧೀಜಿಯ ಸಾವಿನ ಬಗ್ಗೆ ಆಗುತ್ತಿರುವ ಬೆಳವಣಿಗೆಗಳನ್ನು ಹೇಗೆ ನಿಯಂತ್ರಿಸಬಹುದು. ಈ ಉದ್ವಿಗ್ನ ವಾತಾವರಣವನ್ನು ಸೈನ್ಯ ಮತ್ತು ಪೊಲೀಸ್‌ರಿಂದ ನಿಭಾಯಿಸುವುದಕ್ಕೆ ಬಿಡಬಾರದು. ಕೇವಲ ವೈಯಕ್ತಿಕ ತ್ಯಾಗ ಮತ್ತು ಸೇವೆಯ ಮೂಲಕವೇ ನಾವು ದಾರಿಯನ್ನು ಕಂಡುಕೊಳ್ಳಬೇಕು. ಇದನ್ನು ಹೇಗೆ ಮಾಡುವುದು, ಈ ಪ್ರಶ್ನೆ ನಮ್ಮ ಗಮನಕ್ಕಾಗಿ ಆಗ್ರಹಿಸುತ್ತಿದೆ. ದಿಲ್ಲಿ, ಪಂಜಾಬ್ ಎಲ್ಲಿಯಾದರೂ ಸರಿ ಅಲ್ಲಿನ ಸಮಸ್ಯೆ ಪರಿಹಾರವನ್ನು ಕೇಳುತ್ತಿದೆ. ಈ ಹಾಲಾಹಲವನ್ನು ನಾವು ನಿಯಂತ್ರಿಸಲೇಬೇಕು.

ಅಂತಿಮವಾಗಿ ಈ ದೇಶ ಯಾಕೆ ನಮ್ಮ ನಿಯಂತ್ರಣವನ್ನು ಮೀರಿ ಹೋಗುತ್ತಿದೆ. ಇದಕ್ಕೆ ಅನೇಕ ಕಾರಣಗಳಿವೆ. ಕಾಂಗ್ರೆಸ್‌ಗೆ ಸಂಬಂಧಿಸಿದಂತೆ ಅದರ ನಾಯಕರು ಚುನಾವಣೆಗಳ ಬಗ್ಗೆ, ತಮ್ಮ ಸರ್ಕಾರವನ್ನು ನಡೆಸುವ ಬಗ್ಗೆ ಮಗ್ನರಾಗಿದ್ದಾರೆ. ಅವರಿಗೆ ಜನರ ಬಳಿ ಹೋಗಿ ಸೇವೆ ಮಾಡಲು ಅವಕಾಶವೇ ಸಿಕ್ಕುತ್ತಿಲ್ಲ. ನಮ್ಮ ಹಾಗೂ ಜನರ ಮಧ್ಯೆ ದೊಡ್ಡದೊಂದು ಗೋಡೆಯೇ ಎದ್ದಿದೆ. ಕೆಲವು ನಾಯಕರು ತಮ್ಮ ಪ್ರಭಾವ ಮತ್ತು ನಿಲುವುಗಳನ್ನು ಹಾಳಾಗದಂತೆ ಕಾಪಾಡಿಕೊಂಡಿದ್ದರೂ ಸಹ ಕಾಂಗ್ರೆಸ್ ತನ್ನ ವರ್ಚಸ್ಸನ್ನು ಕಳೆದುಕೊಂಡಿದೆ. ಕಾಂಗ್ರೆಸ್‌ನಲ್ಲಿರುವ ಸದಸ್ಯರ ನಡುವಿನ ಭಿನ್ನಾಭಿಪ್ರಾಯಗಳು ಜನತೆಯ ಕಣ್ಣಿಗೇ ಗೋಚರಿಸುವಂತಿವೆ. ಕೆಲವು ನಾಯಕರು ತೋರಿಕೆಯ ಸಂಗತಿಗಳಲ್ಲಿ ಬಿಸಿಯಾಗಿದ್ದಾರೆ. ಯಾರೂ ಸಾರ್ವಜನಿಕ ಸೇವೆಯ ದೃಷ್ಟಿಯಿಂದ ವಿಚಾರ ಮಾಡುತ್ತಿಲ್ಲ. ಈ ನಾಯಕರ ಮತ್ತು ಜನತೆಯ ನಡುವೆ ಇನ್ನೊಂದು ರೀತಿಯ ಜನ ಬಂದಿದ್ದಾರೆ. ನಮಗೀಗ ಎದುರಾಗಿರುವ ಪ್ರಶ್ನೆ ಏನೆಂದರೆ ಈ ಕಾಂಗ್ರೆಸ್ಸನ್ನು ಹೇಗೆ ಸುಧಾರಿಸುವುದು. ಸ್ವಾತಂತ್ರ್ಯವನ್ನು ಗಳಿಸುವ ಅದರ ಐತಿಹಾಸಿಕ ಸಾಧನೆ ಈಗಾಗಲೇ ಸಾಧಿಸಿಯಾಗಿದೆ. ಆದರೆ ಮುಂದೇನು? ಈ ಬಗ್ಗೆ ನಾವು ಸ್ಪಷ್ಟವಾಗಿರಬೇಕು.

ದೇಶದ ತುಂಬಾ ಹರಡಿರುವ ಹಿಂಸೆ, ಕೋಮುವಾದವನ್ನು ವಿರೋಧಿಸುವುದು ಕಾಂಗ್ರೆಸ್ಸಿಗರ ಜವಾಬ್ದಾರಿ. ಈಗಾಗಲೇ ಹಬ್ಬಿರುವ ಈ ವಿಷ ನಮ್ಮನ್ನು ನಾಶಮಾಡಿದೆ. ಅದು ಈ ವಿಶ್ವದ ಅತ್ಯಂತ ಶ್ರೇಷ್ಠ ಮನುಷ್ಯನ ಜೀವವನ್ನೇ ಬಲಿತೆಗೆದುಕೊಂಡಿದೆ.

ಕೆಲವರು ತಮ್ಮ ಸ್ನೇಹಿತರಿಗೆ ಸಿಹಿ ಹಂಚುವ ಮೂಲಕ ಈ ಸಾವನ್ನು ಸಂಭ್ರವಿಸುತ್ತಿದ್ದಾರೆಂದು ನಾನು ಕೇಳಿದ್ದೇನೆ. ಇದರಲ್ಲೇನಾದರೂ ನಿಜಾಂಶ ಇದೆಯೋ ಇಲ್ಲವೋ ಆದರೆ ಇಂಥಾ ಸಂದರ್ಭದಲ್ಲಿಯೂ ಇಂಥಾ ಮಾತುಗಳು ಕೇಳಿ ಬರುತ್ತವೆಂದರೆ ಇದು ಈ ವಿಷಮತೆಯ ಸರ್ವಾಂತರ್ಯಾಮಿತ್ವವನ್ನು ತೋರಿಸುತ್ತದೆ. ಈ ನಿಕೃಷ್ಟತೆಯಿಂದ, ಈ ಹಗೆತನದಿಂದ, ಈ ಪೊಳ್ಳುತನದಿಂದ, ಈ ಅವನತಿಯಿಂದ ಹೇಗೆ ಹೊರಬರುವುದು. ಇದನ್ನು ನೋಡಿದರೆ ನನಗೆ ನಡುಕ ಉಂಟಾಗುತ್ತದೆ. ಇದನ್ನು ಊಹಿಸಿಕೊಳ್ಳಲೂ ನನ್ನಿಂದ ಸಾಧ್ಯವಾಗುತ್ತಿಲ್ಲ. ಹಿಂದಿದ್ದ ಉಗ್ರಗಾಮಿಗಳು ಪ್ರಮುಖವಾಗಿ ಬಿಳಿಯರನ್ನು ಗುರಿಮಾಡಿಕೊಳ್ಳುತ್ತಿದ್ದರು. ಆದರೆ ಇದು, ಈಗ ನಡೆದಿರುವುದು ಅತ್ಯಂತ ಕೆಳದರ್ಜೆಯ ವಿಧ್ವಂಸಕ ಹಿಂಸೆ. ಒಬ್ಬ ಮನುಷ್ಯನ ಹೃದಯ ಛಿದ್ರವಾಗಲು ಇಷ್ಟು ಸಾಕು. ಸರ್ಕಾರದ ಶಕ್ತಿಯಿಂದ ಇದನ್ನು ನಿಯಂತ್ರಿಸುವುದು ಅಸಾಧ್ಯ. ಇದು ನಮ್ಮ ಕಾರ್ಯಕರ್ತರಿಂದ ಮಾತ್ರ ಆಗುವ ಕೆಲಸ. ತರುಣ ಸಮುದಾಯವನ್ನು ಅವರು ಮಾತ್ರ ಪ್ರಭಾವಿಸಬಲ್ಲರು.

ನನ್ನ ಕಾಳಜಿಗಳನ್ನು ನಿಮ್ಮ ಮುಂದಿಡುವ ಕೆಲಸವನ್ನು ಮಾತ್ರ ಮಾಡಿದ್ದೇನೆ. ಇದಕ್ಕಿಂತ ಹೆಚ್ಚು ನಾನೇನು ಮಾಡಬಲ್ಲೆ. ಈ ರಾತ್ರಿಗೇ ನಾನು ಹೊರಡಬೇಕಿದೆ. ಅದೇ ಯಾಂತ್ರಿಕ ಕೆಲಸ ಉದ್ದಕ್ಕೂ ಬಿದ್ದಿದೆ. ನಾನೇನು ಮಾಡಬಲ್ಲೆ ಎಂದರೆ ನೀವು ತೆಗೆದುಕೊಳ್ಳುವ ಎಲ್ಲ ನಿರ್ಧಾರಗಳೂ ಫಲದಾಯಕವಾಗುವಂತೆ ಮಾಡಲು ನನ್ನ ಶಕ್ತಿಮೀರಿ ಪ್ರಯತ್ನಿಸುತ್ತೇನೆ ಎಂದು. ದಯವಿಟ್ಟು ನನ್ನನ್ನು ಮಾರ್ಗದರ್ಶಕನೆಂದು ಭಾವಿಸಬೇಡಿ. ನಾನು ಈ ಶಿಬಿರದ ಅನುಯಾಯಿಗಳಲ್ಲಿ ಒಬ್ಬನೆಂದು ಭಾವಿಸಿ.

ನಮ್ಮೆಲ್ಲರಿಗೂ ಬಾಪುವಿನ ಬದುಕು ಬೆಳಕು ಚೆಲ್ಲುವ ದೀಪದಂತಿದ್ದು, ಅದು ಪ್ರಕಾಶಮಾನವಾಗಿತ್ತು. ನಮ್ಮ ಕಾಯಿಲೆಗಳಿಗೆ ತಯಾರಿಸಿದ ನೋವು ನಿವಾರಕ ಔಷಧವನ್ನು ದೇಶದ ಮೂಲೆಮೂಲೆಗೂ ತಲುಪಿಸುವುದು ಅವರ ಜೊತೆ ನಡೆದಾಡಿದ, ಹೆಜ್ಜೆಯ ಜೊತೆ ಹೆಜ್ಜೆಹಾಕಿದವರ ಕರ್ತವ್ಯವಲ್ಲವೆ? ಬಾಪು ತಯಾರಿಸಿದ ಔಷಧ ತುಂಬಿದ ಪಾತ್ರೆಯನ್ನು ನಿಮ್ಮೊಡನೆ ತೆಗೆದುಕೊಂಡು ಹೋಗಿ ರೋಗಗ್ರಸ್ಥ ಹಿಂದೂಸ್ಥಾನದ ಬಾಯಿಗೆ ಅದನ್ನು ಹಾಕಿರಿ.

ಸಾಭಾರ : ಗಾಂಧಿ ಹೋದರು : ನಮಗೀಗ ದಿಕ್ಕು ತೋರುವವರು ಯಾರು?
ಸಂಪಾದನೆ : ಗೋಪಾಲಕೃಷ್ಣ ಗಾಂಧಿ
ಕನ್ನಡಕ್ಕೆ : ಚಂದ್ರಶೇಖರ ತಾಳ್ಯ

ಸರ್ವೋದಯ ಆಂದೋಲನದ ಮುನ್ನಡೆ

ರಾಷ್ಟ್ರೀಯ ಯುವ ಶಿಬಿರ

ಮಹಾತ್ಮಾ ಗಾಂಧೀಜಿಯವರ ಪರಮಾಪ್ತ ಶಿಷ್ಯರಾಗಿದ್ದ ಮತ್ತು ಅವರ ಐದನೇ ಮಗನೆಂದು ಕರೆಯಲ್ಪಟ್ಟಿಸಿಕೊಂಡಿದ್ದ ಹಾಗೂ ಖಾದಿ ಪ್ರಚಾರಕ್ಕಾಗಿ ತಮ್ಮ ಜೀವನವನ್ನೇ ಅರ್ಪಿಸಿಕೊಂಡಿದ್ದ ಜಮ್ನಾಲಾಲ್ ಬಜಾಜ್ ಅವರ ೧೨೫ನೇ ವರ್ಷದ ಜನ್ಮದಿನದ ನೆನಪಿನಲ್ಲಿ ರಾಷ್ಟ್ರಮಟ್ಟದ ಯುವಕರ ಶಿಬಿರವನ್ನು ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ೫೦೦ಜನ ಯುವಕರಿಗೆ ಮಾತ್ರ ಭಾಗವಹಿಸಲು ಅವಕಾಶವಿದೆ.

ಈ ಯುವ ಶಿಬಿರವು ಗಾಂಧೀಜಿಯವರ ಆಶ್ರಮವಿದ್ದ ಸೇವಾಗ್ರಾಮದಲ್ಲಿ ನಡೆಯಲಿದೆ. ಶಿಬಿರವು ನವೆಂಬರ್ ೨ ಸೋಮವಾರದಿಂದ ನವೆಂಬರ್ ೭ ಶನಿವಾರದವರೆಗೆ ನಡೆಯುವುದು.

ಶಿಬಿರದಲ್ಲಿ ಉಚಿತ ಸಾಧಾರಣ ವಸತಿ ಮತ್ತು ಶಾಖಾಹಾರಿ ಊಟದ ವ್ಯವಸ್ಥೆ ಇರುವುದು. ಶ್ರಮದಾನದ ಕಾರ್ಯಕ್ರಮವು ಇರುವುದು.

ಶಿಬಿರಕ್ಕೆ ಬರುವ ಯುವಕರಿಗೆ ರೈಲ್ವೆ ೨ನೇ ತರಗತಿಯ ಪ್ರವಾಸ ಖರ್ಚನ್ನು ಇಲ್ಲವೇ ೧,೦೦೦ ರೂಪಾಯಿಯನ್ನು ಕೊಡಲಾಗುವುದು.

ಯಾರಲ್ಲಿ ಸಾಮಾಜಿಕ ಹಿತಚಿಂತನೆಯ ಕಾಳಜಿ ಇದೆಯೊ, ಯಾರಿಗೆ ತಮ್ಮ ಸುತ್ತಲಿನ ಪರಿಸರದ ಪರಿಚಯವಿದೆಯೊ ಮತ್ತು ಯಾರು ಸಮಾಜ ಕಾರ್ಯಕ್ಕಾಗಿ ಸಮಯ ಕೊಡಬಲ್ಲರೊ ಅಂಥ ಯುವಕರು ಈ ಯುವ ಶಿಬಿರದಲ್ಲಿ ಭಾಗವಹಿಸಬಹುದು. ಶಿಬಿರಾರ್ಥಿಗಳು ಬರುವಾಗ ತಮ್ಮೊಂದಿಗೆ ತಟ್ಟೆ-ಲೋಟ ಹಗುರಾದ ಹಾಸಿಗೆ-ಹೊದಿಕೆ ಇತ್ಯಾದಿ ತರಬೇಕು.

ಉತ್ತಮ ಭಾರತ ಕಟ್ಟುವುದು ನಮ್ಮ ಕನಸಾಗಿದೆ. ಆದ್ದರಿಂದ ಸತ್‌ಚಾರಿತ್ರ್ಯದ ಮತ್ತು ಸನ್ನಡತೆಯ ಸಕಾರಾತ್ಮಕ ಮನೋಭಾವನೆಯ ಯುವಕರು ಈ ಶಿಬಿರದಲ್ಲಿ ಭಾಗವಹಿಸುವರೆಂದು ನಿರೀಕ್ಷಿಸಲಾಗಿದೆ. ಭಾಗವಹಿಸುವ ಯುವಕರು ತಮ್ಮ ರಾಜ್ಯದ ಹೆಸರಿರುವ ಬ್ಯಾನರ್ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಅಗತ್ಯವಿರಬಹುದಾದ ವೇಷ ಭೂಷಣಗಳನ್ನು ತರಬೇಕು.

ರಾಷ್ಟ್ರೀಯ ಯುವ ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವವರು ಮತ್ತು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವ್ಯಕ್ತಿ ಮತ್ತು ದೂರವಾಣಿ :

ಸುರೇಂದ್ರ ಕೌಲಗಿ, ಅಧ್ಯಕ್ಷರು, ಕರ್ನಾಟಕ ಸರ್ವೋದಯ ಮಂಡಲಿ,
ಮೇಲುಕೋಟೆ, ಜಿಲ್ಲಾ ಮಂಡ್ಯ-೫೭೧ ४೩೧
ದೂರವಾಣಿ : ೯೧४೧೭ ೦೦೮೧೨(ಮೊ) ಹಾಗೂ
ಡಾ.ಹೆಚ್.ಎಸ್.ಸುರೇಶ್, ಬೆಂಗಳೂರು
ದೂರವಾಣಿ : ೯४४೮೦ ೨೭४೦೦(ಮೊ)

ಖಾದಿ ವಿಚಾರ



ನೂರು ವರ್ಷದ ಹಿಂದೆ ೧೯೦೯ರಲ್ಲಿ ಮಹಾತ್ಮಾಗಾಂಧಿಯವರು ಖಾದಿಯ ಕಲ್ಪನೆಯನ್ನು ತಮ್ಮ 'ಹಿಂದ್ ಸ್ವರಾಜ್' ಪುಸ್ತಕದಲ್ಲಿ ಬಿತ್ತಿದ್ದರು. ಆ ಕಲ್ಪನೆ ಈಗ ಸಾಕಾರಗೊಂಡು ಹೆಮ್ಮರವಾಗಿ ಬೆಳೆಯುತ್ತಿದೆ. ಖಾದಿ ಜನ್ಮತಳೆದ ಹೊಸದರಲ್ಲಿ ಅದನ್ನು ಯಾರು ಇಷ್ಟಪಡುತ್ತಿರಲಿಲ್ಲ. ಆಗ ತಯಾರಾಗುತ್ತಿದ್ದ ಬಟ್ಟೆ ಒರಟಾಗಿಯು ಮತ್ತು ತುಂಬ ದಪ್ಪವಾಗಿಯು ಇರುತ್ತಿತ್ತು. ಇನ್ನು ಬೇರೆ ಬೇರೆ ವಿನ್ಯಾಸದ ಬಟ್ಟೆಯ ಮಾತಂತು ದೂರವೇ ಇತ್ತು. ದೇಶದಲ್ಲಿ ಬೆಳೆಯುತ್ತಿರುವ ದಾರಿದ್ರ್ಯಕ್ಕೆ ರಾಟೆ ಮತ್ತು ಕೈಮಗ್ಗ ಬ್ರಹ್ಮಾಸ್ತ್ರವೆಂದು ಗಾಂಧೀಜಿ ಆ ಪುಸ್ತಕದಲ್ಲಿ ವಿವರಿಸಿದ್ದರು. ಭಾರತದ ದಾರಿದ್ರ್ಯವನ್ನು ಯಾವುದು ಹೋಗಲಾಡಿಸುವುದೊ ಅದೇ ಸ್ವರಾಜ್ಯವನ್ನೂ ಸ್ಥಾಪಿಸುವುದೆಂದು ಅವರು ಭಾವಿಸಿದ್ದರು. ಗಾಂಧೀಜಿಯವರ ಅಂದಿನ ಮಾತು ನಿಜವಾಗುವತ್ತ ಸಾಗುತ್ತಿದೆ. ಸ್ವಾತಂತ್ರ ಬಂದ ಮೇಲೆ ಚರಕವನ್ನು ಗೂಟಕ್ಕೆ ನೇತುಹಾಕಲಾಗುವುದೆಂದು ಗಾಂಧೀಜಿಯವರ ಮೆಚ್ಚಿನ ಶಿಷ್ಯ ಜವಹರಲಾಲ್ ನೆಹರು ಹೇಳಿದ್ದರು. ಆಗ ಗಾಂಧೀಜಿ ಹೀಗೆ ಪ್ರತಿಕ್ರಿಯಿಸಿದರು. "ಅಂಥ ಪ್ರಸಂಗ ಬಂದಲ್ಲಿ ಸ್ವತಂತ್ರ ಭಾರತದ ಜೈಲಿನಲ್ಲಿ ನಾನೇ ಪ್ರಥಮ ಖೈದಿ ಆಗುತ್ತೇನೆ". ಆದರೆ ಈಗ ಕಾಲ ಬಹಳಷ್ಟು ಬದಲಾಗಿದೆ. ದೇಶದ ರಾಜಕೀಯ ಮತ್ತು ಆರ್ಥಿಕ ನೀತಿಗಳಲ್ಲಿ ಬದಲಾವಣೆಯಾಗಿದೆ. ದೇಶದ ಪ್ರಧಾನಮಂತ್ರಿಯೇ ಖಾದಿ ಮತ್ತು ಕೈಮಗ್ಗದ ಪ್ರಚಾರಮಾಡುತ್ತಿದ್ದಾರೆ. ಜನಪ್ರಿಯ ಸಿನೆಮಾ ನಟ ಅಮಿತಾಬ್ ಬಚ್ಚನ್ ಅವರನ್ನು ಖಾದಿ ಪ್ರಚಾರಕ್ಕೆ ರಾಯಭಾರಿಯನ್ನಾಗಿ ಗೊತ್ತುಮಾಡಲಾಗಿದೆ. ಇದುವರೆಗೆ ಇದ್ದ ೧,೧೪೦ ಕೋಟಿ ಖಾದಿ ಮೂಲಕ ಬಂದ ಆದಾಯವನ್ನು ೧,೬೦೦ ಕೋಟಿಗೆ ಹೆಚ್ಚಿಸಬೇಕೆಂದು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ತಿಳಿಸಿದೆ. ವಿದೇಶಗಳಲ್ಲೂ ಖಾದಿಗೆ ಬಹಳಷ್ಟು ಬೇಡಿಕೆ ಇದೆ. ಅಲ್ಲಿಯೂ ಕೂಡ ಖಾದಿ ಭಂಡಾರಗಳನ್ನು ತೆರೆಯುವ ಯೋಜನೆಯನ್ನು ಮಾಡುತ್ತಿದೆ. ಈಗ ದೇಶದಲ್ಲಿ ೭,೦೦೦ ನೋಂದಾಯಿತ ಖಾದಿ ಭಂಡಾರಗಳಿವೆ. ಇವುಗಳ ಸಂಖ್ಯೆಯನ್ನು ಇನ್ನು ಎರಡು ವರ್ಷಗಳಲ್ಲಿ ೨೦,೦೦೦ಕ್ಕೆ ಹೆಚ್ಚಿಸಲು ಪ್ರಯತ್ನಮಾಡಲಾಗುತ್ತಿದೆ. ಖಾದಿ ಎಂದರೆ ತಾತ್ಸಾರ ದೃಷ್ಟಿಯಿಂದ ನೋಡುತ್ತಿದ್ದ ಜನರು ಇಂದು ಖಾದಿಯನ್ನು ಪ್ರೀತಿಯಿಂದ ಹಾಕಿಕೊಳ್ಳಬಯಸುತ್ತಿದ್ದಾರೆ. ಖಾದಿ ಯಾವುದೇ ರಾಜಕೀಯ ಪಕ್ಷದ ಸಂಕೇತವಾಗಿರದೆ ಜನರಿಂದ ಜನರಿಗಾಗಿ ನಡೆಯುವ ಒಂದು ದೊಡ್ಡ ಉದ್ಯಮವಾಗಿ ಹೊರಹೊಮ್ಮುತ್ತಲಿದೆ. ಲಕ್ಷಾಂತರ ಬಡನೂಲುಗಾರರು ಮತ್ತು ನೇಕಾರರು ಖಾದಿ ಉದ್ಯಮದ ಮೂಲಕ ಗೌರವಯುತ ಜೀವನ ನಡೆಸುತ್ತಿದ್ದಾರೆ. ಖಾದಿ ಕೇವಲ ಒಂದು ವಸ್ತ್ರವಲ್ಲ. ಅದು ಸತ್ಯ, ಅಹಿಂಸೆ ಮತ್ತು ಮಾನವ ಪ್ರೀತಿ ಹಾಗೂ ಶೋಷಣೆರಹಿತ ಸಮಾಜದ ನಿರ್ಮಾಣದ ವಿಚಾರದ ಸಂಕೇತವಾಗಿದೆ. ಖಾದಿ ತೊಡುವವರು ನೂಲು ತೆಗೆಯಲಿ ಮತ್ತು ನೂಲು ತೆಗೆಯುವವರು ಖಾದಿ ಧರಿಸಲಿ ಎಂದು ಗಾಂಧೀಜಿಯವರ ಸೂತ್ರವನ್ನು ದೇಶವಾಸಿಗಳೆಲ್ಲರು ಅನುಸರಿಸುವಂತಾದರೆ ರಾಟೆಯು ದೇಶದ ಸ್ವರೂಪವನ್ನೇ ಬದಲಾಯಿಸುವುದು.

ಜನಪದ ನಿಲಯದ ಅಂತರಂಗದಲ್ಲಿ – ೧೩೭



ಜನಪದ ನಿಲಯದ ಪಶ್ಚಿಮ ದಿಕ್ಕಿನಲ್ಲಿರುವ ಅಂಗಳದಲ್ಲಿ ಕುಳಿತರೆ ಸೂರ್ಯಾಸ್ತ ಕಾಣುವುದರ ಜೊತೆಗೆ ಲೋಕ ವ್ಯವಹಾರಗಳು ನಿಧಾನವಾಗಿ ನಿಲುಗಡೆಗೆ ಬರುವ ದೃಶ್ಯಗಳು ಕಾಣುತ್ತವೆ. ನಸುಕಿನಲ್ಲಿ ತಮ್ಮ ತಮ್ಮ ದನಕರುಗಳನ್ನು, ಆಡು ಕುರಿಗಳನ್ನು ಹೊಡೆದುಕೊಂಡು ಹೋದ ರೈತರು, ಸೂರ್ಯಾಸ್ತದ ಸಮಯದಲ್ಲಿ ತಮ್ಮ ಜಾನುವಾರುಗಳೊಂದಿಗೆ ಹಿಂದಿರುಗುತ್ತಾರೆ. ಹಸುಗಳು ಚೆನ್ನಾಗಿ ಮೇಯ್ದಿರುವುದರಿಂದ ಅವುಗಳ ಕೆಚ್ಚಲು ಹಾಲಿನಿಂದ ಸಮೃದ್ಧಿಯಾಗಿ ತುಂಬಿಕೊಂಡಿರುತ್ತದೆ. ಸ್ವಚ್ಛವಾಗಿ ಮೈತೊಳೆಸಿಕೊಂಡು ರೂಪಾಯಿ ಬಣ್ಣದ ಒಂದೇ ಎತ್ತರದ ಹೋರಿಗಳು ಲಗು ಬಗೆಯಲ್ಲಿ ಹೆಜ್ಜೆ ಇಡುತ್ತ ಸಾಗುತ್ತಿರುತ್ತವೆ. ತಲೆಯ ಮೇಲೆ ಸಣ್ಣ ಸೌದೆಹೊರೆ ಅಥವಾ ಹುಲ್ಲಿನ ಹೊರೆ ಹೊತ್ತುಕೊಂಡ ರೈತಮಹಿಳೆಯರು ತಮ್ಮ ತಮ್ಮಲ್ಲಿ ಮತನಾಡಿಕೊಳ್ಳುತ್ತಾ ಹೋಗುತ್ತಾರೆ. ಅದೇ ಹೊತ್ತಿಗೆ ಶಾಲೆ ಮುಗಿಸಿ ಮಕ್ಕಳು ಲಗುಬಗೆಯಿಂದ ಮನೆಯ ಕಡೆ ಓಡುತ್ತಿರುತ್ತಾರೆ. ನರಸಿಂಹಸ್ವಾಮಿ ಬೆಟ್ಟಕ್ಕೆ ಹೋಗುವ ಅರ್ಚಕರು ಸಾಂಸಾರಿಕವ್ಯವಹಾರವನ್ನು ಮಾತಾಡುತ್ತ ಹೋಗುತ್ತಿರುತ್ತಾರೆ. ಭಾವುಕ ಮಹಿಳೆಯರು ಕಲ್ಯಾಣಿಯಲ್ಲಿ ಪ್ರದಕ್ಷಿಣೆ ಹಾಕುವುದಕ್ಕೊ ಅಥವಾ ನರಸಿಂಹಸ್ವಾಮಿ ದರ್ಶನಕ್ಕೊ ಹೋಗುತ್ತಾರೆ. ಅವರಲ್ಲಿ ಕೆಲವರು ಸಂಸಾರದ ಭಾರದಿಂದ ಕುಗ್ಗಿದವರಾಗಿ ನೆಮ್ಮದಿಯ ಜೀವನ ಅರಸುತ್ತಾ ಬೆಟ್ಟದ ಕಡೆಗೆ ಹೋಗುವವರಾಗಿದ್ದರೆ ಮದುವೆಯಾಗದ ತರುಣಿಯರು ಕನಸನ್ನು ಕಟ್ಟಿಕೊಂಡು ಹೋಗುತ್ತಿರುತ್ತಾರೆ.


ಮೇಲುಕೋಟೆ ಆಸ್ತಿಕರ ಆಕರ್ಷಣೆಯ ಕೇಂದ್ರವಾಗಿರುವಂತೆ ಪ್ರವಾಸಿಗರ ಭೇಟಿಯ ಸ್ಥಳವೂ ಆಗಿದೆ. ಆದ್ದರಿಂದ ಜನಪದ ನಿಲಯದ ಮುಂದಿನ ರಸ್ತೆಯಲ್ಲಿ ಓಡಾಡುವ ಜನ ವೇಷ-ಭೂಷಣದ ವೈವಿಧ್ಯತೆಯೊಂದಿಗೆ ಭಾಷಾ ವೈವಿಧ್ಯತೆಯು ಕಾಣಬರುತ್ತದೆ. ಶ್ರಾವಣ ಮಾಸದಲ್ಲಿ ನಡೆಯುವ ಎಲ್ಲ ಮದುವೆ, ವಧು-ವರರ ಮೆರವಣಿಗೆ ಈ ಬೀದಿಯಲ್ಲಿಯೇ ಸಾಗುತ್ತದೆ. ವಿವಾಹ ಋತುಮಾನ ಕಳೆಯುವವರೆಗೂ ಮಂಗಳವಾದ್ಯದ ಧ್ವನಿ ಮೊಳಗುತ್ತಿರುತ್ತದೆ. ಜತೆಗೆ

ಆಟೋರಿಕ್ಷಾಗಳ ಮತ್ತು ತರಾವರಿಕಾರುಗಳ, ಮೋಟಾರು ಸೈಕಲ್ಲುಗಳ ಸಂಚಾರ ನಡೆದಿರುತ್ತದೆ. ಈ ಎಲ್ಲ ಲೌಕಿಕ ವ್ಯವಹಾರಗಳ ಜೊತೆಗೆ ಅದನ್ನು ಬಿಟ್ಟಿರಲಾರದ ಮರ್ತ್ಯಲೋಕದ ಘಟನೆಗಳು ನಡೆಯುತ್ತವೆ. ಜನಪದ ನಿಲಯದ ಹಿಂಭಾಗದ ಪ್ರದೇಶದಲ್ಲಿಯೇ ಗ್ರಾಮದ ಜನಸಂಖ್ಯೆಯ ಹೆಚ್ಚಿನ ಭಾಗ ವಾಸವಾಗಿದೆ. ಆ ಪ್ರದೇಶದಲ್ಲಿ ಯಾವುದೇ ಮರಣ ಸಂಭವಿಸಿದರೂ ಸಾವಿನ ಮೆರವಣಿಗೆ ಈ ಬೀದಿಯಲ್ಲಿಯೇ ನಡೆಯುತ್ತದೆ. ಅದರಿಂದಾಗಿ ಆಗಾಗ್ಗೆ ಜಾಗಟೆಯ ಸದ್ದಿನೊಂದಿಗೆ ನಡೆಯುವ ಶವದ ಮೆರವಣಿಗೆಯನ್ನು ನೋಡಲು ಸಿಗುತ್ತದೆ. ಊರ ಹೊರಗಿರುವ ಸ್ಮಶಾನಕ್ಕೆ ಹೋಗುವ ದಾರಿ ಇದೇ ಬೀದಿಯಾಗಿರುತ್ತದೆ. ಹೀಗೆ ಜನಪದ ನಿಲಯದ ಪಶ್ಚಿಮ ದಿಕ್ಕಿನ ಅಂಗಳ ಲೋಕವ್ಯವಹಾರವನ್ನು ಅದರ ವೈವಿಧ್ಯತೆಯೊಂದಿಗೆ ತೋರಿಸಿದರೆ ಅದೇ ನಿಲಯದ ಪೂರ್ವದಿಕ್ಕಿನ ಅಂಗಳದಲ್ಲಿ ಕುಳಿತರೆ ಸುತ್ತಲೂ ನಡೆಯುತ್ತಿರುವ ಪ್ರಕೃತಿಯ ನರ್ತನ ಕಾಣುತ್ತದೆ. ಸುರ್ಯೋದಯದ ನಸುಕಿನ ಹಿತಕರವಾದ ಬೆಳಕಿನಲ್ಲಿ ಬೆಟ್ಟದ ಮೇಲಿರುವ ಶ್ರೀಯೋಗನರಸಿಂಹಸ್ವಾಮಿ ದೇವಸ್ಥಾನದ ಗೋಪುರ ಕಾಣುತ್ತದೆ. ಬಹಳ ಪುರಾತನವಾದ ಈ ಗೋಪುರ ಮತ್ತು ದೇವಸ್ಥಾನ ಪು.ತಿ.ನ ರಂಥ ಕವಿಗಳಿಗೆ, ಗೊರೂರು ರಾಮಸ್ವಾಮಿ ಅಯ್ಯಂಗಾರರಂಥಹ ಸಾಹಿತಿಗಳಿಗೆ ಸಾಹಿತ್ಯ ರಚಿಸಲು ಪ್ರೇರಣೆ ಕೊಟ್ಟಿದ್ದರೆ ಅನೇಕ ಯುವ ಮನಗಳಿಗೆ ಮಹತ್ಸಾಧನೆಮಾಡಲು ಪ್ರೇರಣೆಕೊಟ್ಟಿದೆ. ಹಿತ್ತಲಲ್ಲಿರುವ ಸ್ವಲ್ಪ ವಿಶಾಲವಾದ ಭೂ ಪ್ರದೇಶದಲ್ಲಿ ಸುಮಾರು ನೂರು ವರ್ಷಗಳಷ್ಟು ಹಳೆಯದಾದ ಬೇಲದ ಮರ ಇದೆ. ಶ್ರಾವಣ ಮಾಸದಲ್ಲಿ ಅದರ ಮೈತುಂಬ ಬೇಲದ ಹಣ್ಣುಗಳು ನೇತಾಡುತ್ತಿರುತ್ತವೆ. ಗಾಳಿಯಲ್ಲಿ ಅವು ಓಲಾಡುವುದನ್ನು ನೋಡುವುದೇ ಒಂದು ಬಗೆಯ ಸಂತೋಷ. ವಸಂತ ಋತುವಿನ ಆಗಮನದ ಕಾಲಕ್ಕೆ ಇದುವರೆಗೆ ಯಾವ ಸದ್ದು ಕೊಡದಿದ್ದ ಕೋಗಿಲೆ ಒಮ್ಮೆಲೆ ಬಂದು ಆ ಬೇಲದ ಮರದ ಕೊಂಬೆಗಳನ್ನು ಕೊರಳ ಮಾಡಿಕೊಂಡು ಹಾಡಲು ಪ್ರಾರಂಭಿಸುತ್ತದೆ. ಸುಮಾರು ಎರಡು ತಿಂಗಳ ಕಾಲ ಕೋಗಿಲೆಯ ಕೂಗು ಎಡೆಬಿಡದೆ ಕೇಳಿಸುತ್ತದೆ. ಅದರ ಕೂಗಿಗೆ ಪ್ರತಿಯಾಗಿ ಶಾಲಾ ಮಕ್ಕಳು ಅದರಂತೆಯೇ ಕೂಗಿದಾಗ ಕೋಗಿಲೆಯೂ ಕೂಗುವುದನ್ನು ಕೇಳಿ ಆಶ್ಚರ್ಯವಾಗುತ್ತದೆ. ಹಲವಾರು ಬಗೆಯ ದಾಸವಾಳ ಹೂಗಳು ಅರಳಿ ಆ ಭೂಪ್ರದೇಶವನ್ನು ಅಂದಗೊಳಿಸುತ್ತವೆ. ಆಶಾಢ ಮಾಸದ ಗಾಳಿಯಲ್ಲಿ ತೂಗುವ ಕೆಂಪುಬಣ್ಣದ ಆ ಹೂವುಗಳನ್ನು ನೋಡುತ್ತಿದ್ದರೆ ಸಮಯ ಜಾರುವುದೇ ಗೊತ್ತಾಗುವುದಿಲ್ಲ. ಅಲ್ಲಿ ಇರುವ ಸೀತಾಫಲದ ಗಿಡ ಬರಬರುತ್ತಾ ಮರದ ರೂಪ ತಾಳುತ್ತಿದೆ. ಅದು ಬೆಳೆದಂತೆಲ್ಲ ಗುಬ್ಬಚ್ಚಿಗಳ ವಾಸಸ್ಥಾನ ಮತ್ತು ಕೋತಿಗಳ

ತರಾವರಿ ಆಟಗಳ ತಾಣವಾದರೆ ಜನಪದ ನಿಲಯವು ಬೆಕ್ಕುಗಳ ಸಂಸಾರಕ್ಕೆ ತಾಣವಾಗುತ್ತಿದೆ. ಕೆಲವು ಸಮಯದ ಹಿಂದೆ ಅಪರೂಪಕ್ಕೊಮ್ಮೆ ಒಂದೆರಡು ಗುಬ್ಬಚ್ಚಿಗಳು ಬರುತ್ತಿದ್ದವು. ಅವು ಬರುವುದನ್ನು ನೋಡಿ ಅವು ತಿನ್ನುವುದಕ್ಕಾಗಿ ಅಕ್ಕಿ ಹಾಕಲಾರಂಭಿಸಿದೆವು. ಕ್ರಮೇಣ ಅಕ್ಕಿ ತಿನ್ನಲು ಬರುವ ಗುಬ್ಬಚ್ಚಿಗಳ ಸಂಖ್ಯೆ ಹೆಚ್ಚಾಗುತ್ತಾ ಬಂತು. ಇತ್ತೀಚೆಗೆ ಅವುಗಳ ಸಂಖ್ಯೆ ೧೫ರಿಂದ ೨೦ ಆಗಿದೆ. ಅವೆಲ್ಲವು ಬಂದು ಕಲ್ಲುಬೆಂಚಿನ ಮೇಲೆ ಹಾಕಿದ ಅಕ್ಕಿಯನ್ನು ಹೆಕ್ಕಿ ಹೆಕ್ಕಿ ತಿನ್ನುವುದನ್ನು ನೋಡುವುದು ಬಹಳ ಮನೋರಂಜಕವಾಗಿರುತ್ತದೆ. ನಗರದಲ್ಲಿ ಗುಬ್ಬಚ್ಚಿಗಳೇ ಕಾಣುತ್ತಿಲ್ಲ ಎಂಬ ಅಸಂತೋಷದ ಧ್ವನಿ ಕೇಳಿಬರುತ್ತಿರುವಾಗ ನಿಲಯದ ಹಿತ್ತಲಲ್ಲಿ ಗುಬ್ಬಚ್ಚಿಗಳ ಸಮ್ಮಿಲನವನ್ನು ನೋಡುವುದು ವಿಶೇಷ ಅವಕಾಶವೆಂದೇ ಹೆಮ್ಮೆ ಎನಿಸುತ್ತದೆ. ಗುಬ್ಬಚ್ಚಿಗಳ ಜೊತೆಗೆ ಕೆಲವೊಂದು ಸಲ ಕಾಡುಪಾರಿವಾಳಗಳು ಮತ್ತು ಮೈನ ಹಕ್ಕಿಗಳು ಅಕ್ಕಿ ತಿನ್ನಲು ಸೇರಿಕೊಳ್ಳುತ್ತವೆ. ಅವುಗಳಿಗೆ ಈ ಸುದ್ದಿಮುಟ್ಟಿಸಿದವರಾರು ಗೊತ್ತಿಲ್ಲ. ಅನಿರೀಕ್ಷಿತವಾಗಿ ಬರುತ್ತಿರುವ ಈ ಪಾರಿವಾಳಗಳ ಹಾಜರಿಯು ನೋಡಲು ಹೆಚ್ಚು ವೈವಿಧ್ಯವಾಗಿ ಕಾಣುತ್ತದೆ. ಇದಿಷ್ಟು ಸಾಲದೆಂಬಂತೆ ಆಗಾಗ್ಗೆ ಮೂರು ನಾಲ್ಕು ಅಳಿಲುಗಳು ಬಂದು ಅಕ್ಕಿಯನ್ನು ತಿಂದುಹೋಗುತ್ತವೆ. ಅಪರೂಪಕ್ಕೊಮ್ಮೆ ಕಾಗೆಯೂ ಬಂದು ಹೋಗುತ್ತದೆ. ಹೀಗೆ ಒಂದು ಕಡೆ ಪಕ್ಷಿಗಳ ಸಮ್ಮಿಲನ ನಡೆಯುತ್ತಿದ್ದರೆ ಇನ್ನೊಂದೆಡೆ ಗುಲಾಬಿ, ಸೇವಂತಿಗೆ, ಜಾಜಿ, ದಾಸವಾಳ ಹೂವುಗಳ ಸುತ್ತ ಚಿಟ್ಟೆಗಳು ಸುತ್ತುತ್ತಿರುವುದು ಕಾಣುತ್ತದೆ. ಬಾವಿಯ ಪಕ್ಕ ಇರುವ ತೆಂಗಿನಮರ ಛತ್ರಿಯ ಆಕಾರದಲ್ಲಿ ತನ್ನ ಗರಿಗಳನ್ನು ಚಾಚಿದೆ. ಅದರ ನೆರಳು ಹಿತ್ತಲ ತುಂಬೆಲ್ಲ ಹರಡಿರುತ್ತದೆ. ತೆಂಗಿನಮರದ ನೆರಳಲ್ಲಿ ಕುಳಿತುಕೊಂಡು ಹಿತ್ತಲಲ್ಲಿ ನಡೆಯುವ ಪ್ರಕೃತಿ ವೈಭವ ನೋಡುವುದೇ ಒಂದು ವಿಶೇಷ ಅನುಭವ, ಅಲ್ಲದೆ ಎಲ್ಲಿ ಆಕಾಶದರ್ಶನ ಸುಲಭವಾಗಿ ಆಗುತ್ತದೊ ಅಲ್ಲಿ ಸುಖವಿದೆ ಎಂದು ಹೇಳುವ ವೇದದ ಮಾತು ಎಷ್ಟು ಸತ್ಯವೆಂದುಸಹ ಅರಿವಾಗುತ್ತದೆ.


ಈ ರೀತಿ ಜನಪದ ನಿಲಯದ ಪಶ್ಚಿಮ ದಿಕ್ಕಿನಲ್ಲಿರುವ ಅಂಗಳ ಮತ್ತು ಪೂರ್ವದಿಕ್ಕಿನಲ್ಲಿರುವ ಹಿತ್ತಲು ಎರಡು ವಿವಿಧ ಲೋಕವ್ಯವಹಾರಗಳನ್ನು ದರ್ಶಿಸುತ್ತವೆ.

ದುಃಖ




ರಾಷ್ಟ್ರಪತಿ ಡಾ|| ಎ.ಪಿ.ಜೆ.ಅಬ್ದುಲ್ ಕಲಾಂ ಭಾರತೀಯರನ್ನೆಲ್ಲಾ ಅಗಲಿ ಹೋಗಿದ್ದಾರೆ. ಜೀವನವಿಡಿ ಭಾರತದಾದ್ಯಂತ ಸುತ್ತಿ ಯುವಕರಲ್ಲಿ, ವಿದ್ಯಾರ್ಥಿಗಳಲ್ಲಿ ಮತ್ತು ಸಾಮಾನ್ಯ ಜನತೆಯಲ್ಲಿ ಕೂಡ ಪ್ರಬುದ್ಧ ಭಾರತದ ಕಲ್ಪನೆಯನ್ನು ಬಿತ್ತಿದ್ದಾರೆ. ದೇಶದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಎ.ಪಿ.ಜೆ.ಅಬ್ದುಲ್ ಕಲಾಂ ಅವರ ನಿಧನಕ್ಕಾಗಿ ಜನಪದ ವಿಚಾರ ದುಃಖ ತಪ್ತವಾಗಿದೆ. ಅವರಿಗೆ ಶಾಂತಿ ಕೋರುತ್ತದೆ.

****



ಕರ್ನಾಟಕದ ಗಡಿ ಪ್ರದೇಶದಲ್ಲಿ ಇದ್ದುಕೊಂಡೆ ಕನ್ನಡ ಭಾಷೆಯ ಕೈಂಕರ್ಯ ಕೈಗೊಂಡ ಕೈಯ್ಯಾರ ಕಿಞ್ಞಣ್ಣ ರೈ ತಮ್ಮ ನೂರು ವರ್ಷದ ಜೀವನವನ್ನು ಸಾರ್ಥಕವಾಗಿ ಕಳೆದಿದ್ದಾರೆ. ಅವರು ಮಾಡಿದ ಸಾಹಿತ್ಯ ಸೇವೆಗಾಗಿ ಮತ್ತು ಕಾಸರಗೋಡನ್ನು ಕರ್ನಾಟಕದಲ್ಲಿ ವಿಲೀನಗೊಳಿಸಲು ಮಾಡಿದ ಹೋರಾಟಕ್ಕಾಗಿ ಕರ್ನಾಟಕ ಅವರಿಗೆ ಸದಾಕಾಲ ಋಣಿಯಾಗಿರುತ್ತದೆ. ಅಂಥ ಮಹನೀಯರನ್ನು ಕಳೆದುಕೊಂಡ ದುಃಖ ಜನಪದವಿಚಾರಕ್ಕೆ ಇದೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತದೆ.

****



ಇದುವರೆಗೆ ಕರ್ನಾಟಕದಲ್ಲಿ ಆಗದೇ ಇದ್ದಂತಹ ವೈಚಾರಿಕತೆಯ ಮೇಲಿನ ದಾಳಿ ಪ್ರೊ.ಎಂ.ಎಂ.ಕಲಬುರ್ಗಿಯವರ ಮೇಲೆ ಉಂಟಾಗಿದೆ. ಇದೊಂದು ಅಕ್ಷಮ್ಯ ಅಪರಾಧ; ವೈಚಾರಿಕ ಸ್ವಾತಂತ್ರ್ಯದ ಕೊಲೆ. ಇದನ್ನು ಖಂಡಿಸುತ್ತ ಜನಪದ ವಿಚಾರ ತನ್ನ ಅತೀವ ದುಃಖವನ್ನು ವ್ಯಕ್ತಪಡಿಸುತ್ತದೆ ಮತ್ತು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ.ಹೆಚ್.ಎಸ್.ಸತೀಶ್ – ಬೆಂಗಳೂರು

ಶ್ರೀ.ಎಮ್.ಮೋಹನ್ ಕುಮಾರ್ – ಮೈಸೂರು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ.ಗಣೇಶ ಅಮೀನಗಡ, ಶ್ರೀ.ಬಿ.ಎಸ್.ವಿನಯ್,

ಶ್ರೀಮತಿ.ಆರ್.ಆಂಡಾಳ್ – ಮೈಸೂರು

ಡಾ–ಸಿ.ಆರ್.ಮಂಜುನಾಥ್, ಶ್ರೀ.ಎನ್.ಬಿ.ಶೌರ್ಯ – ಮಂಡ್ಯ

ಶ್ರೀ.ಡಿ.ಎಸ್.ದೊರೆಸ್ವಾಮಿ, ಶ್ರೀ.ಎ.ಡಿ.ಸಿಲ್ವ – ಚಾಮರಾಜನಗರ

ಶ್ರೀ.ಬಿ.ಎಸ್.ಜಯಸಿಂಹ – ಬೆಂಗಳೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ. ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237